ಸಂಪುಟ 01 | ಸಂಚಿಕೆ 163 | ಗುರುವಾರ 07 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಅಥ್ಲೆಟಿಕ್ಸ್ ದಿನ**

ಯುವಜನರಲ್ಲಿ, ಶಾಲೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಕ್ರೀಡೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅಥ್ಲೆಟಿಕ್ಸ್ ಕ್ಷೇತ್ರದಲ್ಲಿ ಹೊಸ ಪ್ರತಿಭೆಗಳು ಮತ್ತು ಯುವಕರನ್ನು ಪರಿಚಯಿಸಲು ವಿಶ್ವ ಅಥ್ಲೆಟಿಕ್ಸ್ ದಿನವನ್ನು ಮೇ 7 ರಂದು ಆಚರಿಸಲಾಗುತ್ತದೆ

**2) ರವೀಂದ್ರನಾಥ ಟ್ಯಾಗೋರ್ ಜಯಂತಿ**

ಇತರ ರಾಜ್ಯಗಳಲ್ಲಿ ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ, ಇದನ್ನು ಮೇ 7 ರಂದು ಆಚರಿಸಲಾಗುತ್ತದೆ. ಅವರು ಮೇ 7, 1861 ರಂದು ಕೋಲ್ಕತ್ತಾದಲ್ಲಿ ಜನಿಸಿದರು. ಪಶ್ಚಿಮ ಬಂಗಾಳದಲ್ಲಿ ಇದನ್ನು ಬೋಯಿಶಾಖ್ ತಿಂಗಳ 25 ನೇ ದಿನದಂದು ಆಚರಿಸಲಾಗುತ್ತದೆ. ಅವರು ಭಾರತದ ಶ್ರೇಷ್ಠ ಕಲಾವಿದರು, ಕಾದಂಬರಿಕಾರರು, ಲೇಖಕರು, ಬಂಗಾಳಿ ಕವಿಗಳು, ಮಾನವತಾವಾದಿಗಳು, ತತ್ವಜ್ಞಾನಿಗಳು ಮುಂತಾದವರಲ್ಲಿ ಒಬ್ಬರಾಗಿದ್ದರು. 1913 ರಲ್ಲಿ, ಅವರಿಗೆ ಸಾಹಿತ್ಯದಲ್ಲಿ ನೊಬೆಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಸುಭಾಷಿತ

ಗುಂಪಿನಿಂದ ಬೇರೆಯಾಗಿ ಎತ್ತರದಲ್ಲಿ
ನಿಲ್ಲುವುದಕ್ಕೆ ನೀವು ಮನಸ್ಸು ಮಾಡಿದ್ದರೆ,
ಗುಂಪಿನಿಂದ ತೂರಿಬರುವ ಕಲ್ಲುಗಳಿಗೆ ಎದೆ
ಕೊಡಲು ಸಿದ್ಧರಾಗಿರಬೇಕು.

–ವಿಕ್ರಮ್ ಸಾರಾಭಾಯ್

# ಶೃಂಗೇರಿ ಅಂಚೆ ಮತ ಎಣಿಕೆ

# FSL ತನಿಖೆಗೆ ಕೃಷ್ಣ ಬೈರೇಗೌಡ ಆಗ್ರಹ






**ಹಾಸನ: ಪಂಚರಾಜ್ಯಗಳ ಚುನಾವಣೆ ಫಲಿತಾಂಶ ವಿಚಾರಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವ ಮತ್ತು ಜಿಲ್ಲಾಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ ನೀಡಿದ್ದಾರೆ.ಹಾಸನದಲ್ಲಿ ಇಂದು ಈ ಕುರಿತು ಮಾಧ್ಯಮಗಳೊಂದಿಗೆ ಪ್ರತಿಕ್ರಿಯೆ ನೀಡಿದ ಅವರು, ಕೇರಳದಲ್ಲಿ ನೇರ ಸ್ಪರ್ಧೆ ಇದ್ದರೂ ನಿರೀಕ್ಷೆಗೂ ಮೀರಿ ಕಾಂಗ್ರೆಸ್‌ಗೆ ಉತ್ತಮ ಫಲಿತಾಂಶ ಬಂದಿದ್ದು ಸಂತೋಷ ತಂದಿದೆ ಎಂದು ಹೇಳಿದರು.**

ತಮಿಳುನಾಡಿನಲ್ಲಿ ಡಿಎಂಕೆ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬ ನಿರೀಕ್ಷೆ ಇದ್ದರೂ, ಯುವ ಸಮುದಾಯ ಬದಲಾವಣೆಯನ್ನು ಬಯಸಿರುವುದು ಸ್ಪಷ್ಟವಾಗಿದೆ. ಅಲ್ಲಿನ ಜನರು ರಾಜಕೀಯ ವಿಶ್ಲೇಷಣೆಯಿಗಿಂತ ಸಮಾಜದ ಬದಲಾವಣೆಗೆ ಆದ–’ತೆ ನೀಡಿದ್ದು, ಹೊಸ ಅಧ್ಯಾಯವನ್ನು ಆರಂಭಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯವರು ಹಲವು ಸಂಸ್ಥೆಗಳ ದುರುಪಯೋಗದ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ ಎಂದು ಆರೋಪಿಸಿದರು. ಮಮತಾ ಬ್ಯಾನರ್ಜಿ ಅವರಿಗೆ ಅನ್ಯಾಯವಾಗಿ ಹಿಂಸೆ ನೀಡಲಾಗಿದೆ ಎಂದೂ ಹೇಳಿದರು. ಆದ–’ರೆ ಜನರ ತೀರ್ಪನ್ನು ಗೌರವಿಸುವುದು ಮುಖ್ಯವಾಗಿದ್ದು, ಅದನ್ನು ಸಮಚಿತ್ತದಿಂದ ಸ್ವೀಕರಿಸುತ್ತೇವೆ. ಒಟ್ಟಾರೆ, ಕೇರಳದ ಫಲಿತಾಂಶ ಕಾಂಗ್ರೆಸ್‌ಗೆ ಸಮಾಧಾನ ಮತ್ತು ಸಂತೋಷ ತಂದಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಶೃಂಗೇರಿ ಕ್ಷೇತ್ರದ ಮರು ಮತ ಎಣಿಕೆ ವಿಚಾರಕ್ಕೆ ಸಂಬಂಧಿಸಿದಂತೆ ಗಂಭೀರ ಆರೋಪಗಳನ್ನು ಮಾಡಿದ ಅವರು, ಹಿಂದಿನ ಮತ ಎಣಿಕೆಯ ಬಳಿಕ ಕೆಲವು ಪೋಸ್ಟಲ್ ಬ್ಯಾಲೆಟ್‌ಗಳಲ್ಲಿ ತಿದ್ದುಪಡಿ ನಡೆದಿದೆ ಎಂದು ಹೇಳಿದ್ದಾರೆ. ಎಲ್ಲಾ ಪಕ್ಷಗಳ ಏಜೆಂಟ್‌ಗಳು ಒಪ್ಪಿ ಸಹಿ ಹಾಕಿದ ನಂತರವೂ ಮತಗಳಲ್ಲಿ ಬದಲಾವಣೆ ಮಾಡಲಾಗಿದೆ ಎಂಬುದು ಅವರ ಆರೋಪವಾಗಿದೆ. ವಿಶೇಷವಾಗಿ, ಕೆಲವು ಮತಗಳಲ್ಲಿ ಮೊದಲು ಒಂದು ಅಭ್ಯರ್ಥಿಗೆ ಹಾಕಿದ್ದ ಟಿಕ್ ಮಾರ್ಕ್‌ಗೆ ಕೆಳಭಾಗದಲ್ಲಿ ಬೇರೆ ಇಂಕ್ ಬಳಸಿ ಮತ್ತೊಂದು ಟಿಕ್ ಹಾಕಿ, ಆ ಮತಗಳನ್ನು ಅಮಾನ್ಯಗೊಳಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಇದನ್ನು ಅವರು "ಸಂಪೂರ್ಣ ಕ್ರಿಮಿನಲ್ ಸಂಚು" ಎಂದು ಬಣ್ಣಿಸಿದ್ದಾರೆ.

ಈ ಕುರಿತು ಸತ್ಯಾಂಶ ಬಹಿರಂಗವಾಗಲು ಫರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿ **(FSL)**ಗೆ ಮತಪತ್ರಗಳನ್ನು ಕಳುಹಿಸಿ, ಮೇಲಿನ ಮತ್ತು ಕೆಳಗಿನ ಟಿಕ್ ಮಾರ್ಕ್‌ಗಳಿಗೆ ಬಳಸಿದ ಇಂಕ್ ಒಂದೇನಾ ಅಥವಾ ಬೇರೆನಾ ಎಂಬುದನ್ನು ಪರೀಕ್ಷಿಸಬೇಕು ಎಂದು ಆಗ್ರಹಿಸಿದ್ದಾರೆ.

## ತ್ವರಿತಗತಿಯಲ್ಲಿ ಕರೆಂಟ ಕಂಬಗಳ ಜೋಡಣೆ ಕಾರ್ಯ ಸಾರ್ವಜನಿಕರು ಮೆಚ್ಚುಗೆ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಸಮೀಪದ ಜೋಳದರಾಶಿಕ್ಯಾಂಪ ಮತ್ತು ಪಲ್ಲಯ್ಯಕ್ಯಾಂಪ ಹೊಲಗದ್ದೆಗಳಲ್ಲಿ ಹಿಂದೆ ಸುರಿದ ಭಾರಿ ಪ್ರಮಾಣದಲ್ಲಿ ಗಾಳಿ ಮಳೆಗೆ ಬಿದ್ದ ಇಪ್ಪತ್ತಕ್ಕು ಕರೆಂಟ್ ಕಂಬಗಳು ವೈರ್ ಸಮೇತ ಬಿದ್ದು ಇಪ್ಪತ್ತು ದಿನಗಳಾಗಿ–ತ್ತು ಕೆಲಸ ಮಾಡಿರಲಿಲ್ಲ,ಪತ್ರಿಕೆಯಲ್ಲಿ ಸುದ್ದಿ ಪ್ರಸರಣ ಮಾಡಲಾಗಿತ್ತು.**



ಹೀಗಾಗಿ ಮಸ್ಕಿ ಜೆಸ್ಕಾಂ ಇಲಾಖೆಯ ಜೆಇ ಮುರಳಿಕೃಷ್ಣ ಮತ್ತು ಅವರ ಸಿಬ್ಬಂದಿ ಸೇರಿ ಹೊಲಗಳಲ್ಲಿ ಬಿದ್ದಿದ್ದ ಕರೆಂಟ್ ಕಂಬ,ವೈರ್ ಗಳನ್ನು ಜೋಡಣಿ ಕಾರ್ಯ ಬಹಳಷ್ಟು ತ್ವರಿತಗತಿಯಲ್ಲಿ ಕೆಲಸ ಮಾಡಿದ್ದು ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರವಾಗಿದ್ದು ಹೆಮ್ಮೆಯ ವಿಷಯ.ಏಕೆಂದರೆ ಪ್ರಸ್ತುತ ಮಳೆಯೂ ದಿನದಿಂದ ದಿನಕ್ಕೆ ಹೆಚ್ಚಾದ ಕಾರಣ ರೈತರು ಕೃಷಿಗೆ ಸಂಬಂಧಿಸಿದ ಚಟುವಟಿ–ಕೆಗಳನ್ನು ತಯಾರು ಮಾಡುತ್ತಾರೆ ಅದಕ್ಕೆ ಜೆಸ್ಕಾಂ ಅಧಿಕಾರಿಗಳ ಕೆಸಲ ಶೀಘ್ರವಾಗಿ ಮಾಡಿದ್ದರಿಂದ ಬಹಳ ಸಂತೋಷ ವ್ಯಕ್ತಪಡಿಸಿದರು.

# ಖಾಸಗಿ ಶಾಲೆ ವಿದ್ಯಾರ್ಥಿ ಮಹೇಶ ಅಮಾತೆಪ್ಪ ತಾಲೂಕಿಗೆ ಟಾಪ್

## ಜೇವರ್ಗಿ ತಾಲೂಕಿಗೆ ಖಾಸಗಿ ಶಾಲೆ ಮಾತೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ವಿದ್ಯಾರ್ಥಿ ಟಾಫ್



ಎಸ್ ಎಸ್ ಎಲ್ ಸಿ ಟಾಫರ್ ಹಾಗೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸುತ್ತಿರುವುದು

ನೈಜ್ಯ ದೆಸೆ ನ್ಯೂಸ್

**ಜೇವರ್ಗಿ: ತಾಲೂಕಿನ ಖಾಸಗಿ ಶಾಲೆಗಳಲ್ಲಿಯೇ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಜ್ಞಾನ ನಿಧಿ ವಿದ್ಯಾ ಟ್ರಸ್ಟ್ (ರಿ) ಇದರ ಅಡಿಯಲ್ಲಿ ನಡೆಯುತ್ತಿರುವ ಮಾತೇಶ್ವರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಕನ್ನಡ ಮತ್ತು ಆಂಗ್ಲ ಮಾಧ್ಯಮದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ತಾಲೂಕಿಗೆ ಕೀರ್ತಿ ತಂದಿದ್ದಾರೆ.**

ವಿದ್ಯಾರ್ಥಿ ಮಹೇಶ್ ಅಮಾತೆಪ್ಪ 96.32% ಪ್ರತಿಶತ ಅಂಕಗಳನ್ನು ಪಡೆದು ಇಡಿ ಜೇವರ್ಗಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾನೆ ಎಂದು ಸಂಸ್ಥೆಯ ಉಪಾಧ್ಯಕ್ಷರಾದ ನಾಗಭೂಷಣ ಪಡಶೆಟ್ಟಿಯವರು ತಿಳಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಪುಷ್ಪ ನಮನಗಳೊಂದಿಗೆ ವೇದಿಕೆಗೆ ಸ್ವಾಗತಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸುಮಾ ಎನ್ ಪಡಶೆಟ್ಟಿಯವರು ಮಾತನಾಡಿ, ಶಾಲೆಯ ಶಿಕ್ಷಕರ ಗುಣಮಟ್ಟದ ಬೋಧನೆಯಿಂದಲೇ ವಿದ್ಯಾರ್ಥಿಗಳು ಈ ಸಾಧನೆ ಮಾಡಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಹಾಗೂ ರಾಜ್ಯ ಮಟ್ಟದಲ್ಲೂ ವಿದ್ಯಾರ್ಥಿಗಳು ಸಾಧನೆ ಮಾಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಜೊತೆಗೆ ವಿದ್ಯಾರ್ಥಿಗಳ ಮುಂದಿನ ವ್ಯಾಸಂಗ ಹಾಗೂ ಭವಿಷ್ಯಕ್ಕೆ ಶುಭಹಾರೈಸಿದರು.

ಈ ಸಂದರ್ಭದಲ್ಲಿ ತಾಲೂಕಿಗೆ ಪ್ರಥಮ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶರಣಗೌಡ ಪಾಟೀಲ್ ಕುರಳಗೇರಾ, ಉಪಾಧ್ಯಕ್ಷರಾದ ನಾಗಭೂಷಣ ಪಡಶೆಟ್ಟಿ, ಕಾರ್ಯದರ್ಶಿ ಸುಮಾ ಎನ್ ಪಡಶೆಟ್ಟಿ, ಸಂಚಾಲಕರಾದ ಸಂಗೀತಾ ಎಸ್ ಪಡಶೆಟ್ಟಿ, ಶಾಲಾ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಾಗಲಕೋಟೆ ಉಪಚುನಾವಣೆ ಭ್ರಷ್ಟಾಚಾರದ ಆರೋಪ; ಅಹೋರಾತ್ರಿ ಧರಣಿ ಆರಂಭ

ನೈಜ್ಯ ದೆಸೆ ನ್ಯೂಸ್

**ಬಾಗಲಕೋಟೆ: 2026ರ ಬಾಗಲಕೋಟೆ ಜಿಲ್ಲಾ ಉಪಚುನಾವಣೆಯಲ್ಲಿ ಚುನಾವಣಾ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ, ಕಾಂಗ್ರೆಸ್ ಪಕ್ಷದ ಶಾಸಕ ಉಮೇಶ್ ಊ. ಮೇಟಿ, ಚುನಾವಣಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಇಂದು ಬಾಗಲಕೋಟೆ ಜಿಲ್ಲಾಡಳಿತ ಭವನದ ಎದುರು ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಲಾಗಿದೆ.**




KRS ಅಭ್ಯರ್ಥಿ ನಾಗರಾಜ ಎಸ್. ಕಳಕೂಟಗಾರ್ ನೇತೃತ್ವದಲ್ಲಿ ನಡೆಯುತ್ತಿರುವ ಈ ಧರಣಿಯಲ್ಲಿ, ಚುನಾವಣಾ ಪ್ರಕ್ರಿಯೆಯಲ್ಲಿ ಅನೈತಿಕ ವಿಧಾನಗಳಿಂದ ಗೆಲುವು ಸಾಧಿಸಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಪ್ರತಿಭಟನಾಕಾರರು "ಸ್ವಾತಂತ್ರ್ಯ ಸಮಾನತೆ ಪ್ರಜಾಪ್ರಭುತ್ವ" ಮೌಲ್ಯಗಳನ್ನು ಉಳಿಸಿಕೊಳ್ಳಲು ಪ್ರಾಮಾಣಿಕ, ಪ್ರಭುದ್ಧ ಹಾಗೂ ಜನಪರ ಮನೋಭಾವ ಹೊಂದಿದ ಬಾಗಲಕೋಟೆ ಜಿಲ್ಲೆಯ ಜನತೆ ಈ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಜೊತೆಗೆ ಭ್ರಷ್ಟಗೊಂಡ ವ್ಯವಸ್ಥೆಯನ್ನು ಪರಿವರ್ತಿಸಲು ಜನರು ಮುಂದಾಗಬೇಕು ಎಂದು ಕರೆ ನೀಡಿದ್ದಾರೆ. ಧರಣಿ ಸತ್ಯಾಗ್ರಹ ಅಹೋರಾತ್ರಿ ಮುಂದುವರೆಯಲಿದ್ದು,ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಸಂಘಟಕರು ತಿಳಿಸಿದ್ದಾರೆ.

## ಸ್ನಾನ ಮಾಡ್ತಿದ್ದ ಯುವತಿಯ ವಿಡಿಯೋ ಚಿತ್ರಿಸಿದ ಕಿರಾತಕ: ದೂರು ದಾಖಲು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಯುವಕನೊಬ್ಬ ಬಾಡಿಗೆ ಮನೆಯಲ್ಲಿ ಸ್ನಾನ ಮಾಡ್ತಿದ್ದ ಯುವತಿಯ ವಿಡಿಯೋ ಚಿತ್ರೀಕರಿಸಿದ ಘಟನೆ ಬೆಂಗಳೂರಿನ ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.**




ಗರುಡಾಚಾರ್ ಪಾಳ್ಯದಲ್ಲಿ ವಾಸವಾಗಿದ್ದ 23 ವರ್ಷ ಸಾಫ್ಟ್‌ವೇರ್ ಇಂಜಿನಿಯರ್ ಎಂದಿನಂತೆ ಸ್ನಾನಕ್ಕೆ ಹೋಗಿದ್ದಾರೆ. ಏನೋ ಸದ್ದಾಗಿದೆ ಎನ್ನಿಸಿದಾಗ ಹಿಂದಕ್ಕೆ ತಿರುಗಿದ್ದಾರೆ. ಆಗ ವ್ಯಕ್ತಿಯೊಬ್ಬ ಅವರ ವಿಡಿಯೋ ಮಾಡಿದ್ದು ಕಾಣಿಸಿದೆ. ತಕ್ಷಣ ಆಕೆ ಕಿರುಚಿದ್ದಾರೆ, ವ್ಯಕ್ತಿ ಓಡಿಹೋಗಿದ್ದಾರೆ. ತಕ್ಷಣವೇ ಯುವತಿ ಪೊಲೀಸ–ರಿಗೆ ದೂರು ನೀಡಿದ್ದಾರೆ. ಪೊಲೀಸರು ಆತನನ್ನು ಹುಡುಕುತ್ತಿದ್ದಾರೆ. ಈ ಘಟನೆಯಿಂದ ಮಾನಸಿಕವಾಗಿ ಯುವತಿ ಕುಗ್ಗಿಹೋಗಿದ್ದಾರೆ. ತನ್ನ ವಿಡಿಯೋವನ್ನು ಸಾಮಾಜಿ–ಕ ಜಾಲತಾಣಗಳಿಗೆ ಅಪ್‌ಲೋಡ್ ಮಾಡುವ ಭೀತಿ ಅವರನ್ನು ಕಾಡುತ್ತಿದೆ.

# ಬೇಸಿಗೆಯ ಬಿಸಿಗೆ ನೀರಿನ ಕಾವಲು: ಮಸ್ಕಿಯಲ್ಲಿ ತುರ್ತು ಕ್ರಮಕ್ಕೆ ಶಾಸಕ ಬಸನಗೌಡ ತುರ್ವಿಹಾಳ ಸೂಚನೆ.

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಬೇಸಿಗೆಯ ತಾಪಮಾನ ಏರಿಕೆಯಾಗುತ್ತಿದ್ದಂತೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚ–ರಿಕಾ ಕ್ರಮ ಕೈಗೊಳ್ಳಬೇಕು ಎಂದು ಮಸ್ಕಿ ಕ್ಷೇತ್ರದ ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾದ ಬಸನಗೌಡ ತುರ್ವಿಹಾಳ ಅಧಿಕಾ–ರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಬುಧವಾರ ನಡೆದ ಕುಡಿಯುವ ನೀರಿನ ಸಮೀಕ್ಷಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**



ಕ್ಷೇತ್ರದ ಎಲ್ಲಾ ಕೆರೆಗಳನ್ನು ಈಗಾಗಲೇ ಭರ್ತಿಗೊಳಿಸಿರುವುದರಿಂದ, ಲಭ್ಯವಿರುವ ನೀರನ್ನು ಸಮರ್ಪಕವಾಗಿ ಪೂರೈಸುವ ಜವಾಬ್ದಾರಿ ಅಧಿಕಾ–ರಿಗಳ ಮೇಲಿದೆ. ಪೈಪ್‌ಲೈನ್ ಒಡೆದು ನೀರು ಪೋಲಾಗುವ ಘಟನೆಗಳನ್ನು ತಕ್ಷಣವೇ ದುರಸ್ತಿ ಮಾಡುವಂತೆ ಸೂಚಿಸಿದರು. ಜೊತೆಗೆ ನೀರಿನ ತೊಟ್ಟಿಗಳನ್ನು ವಾರಂವಾರ ಸ್ವಚ್ಛಗೊಳಿಸಿ, ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಗೆ ವಿಶೇಷ ಗಮನಹರಿಸಬೇಕು ಎಂದರು. ಈ ಸಂದರ್ಭದಲ್ಲಿ ಮಸ್ಕಿ ತಾಲೂಕು ಪಂಚಾಯತಿಯ ಆಡಳಿತಾಧಿಕಾರಿಗಳು ಹಾಗೂ ಜಿಪಂ ಮುಖ್ಯ ಯೋಜನಾಧಿಕಾ–ರಿಗಳಾದ ಡಾ.ಟಿ.ರೋಣಿ ಮಾತನಾಡಿ,ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತಾಪಂಯಲ್ಲಿ ಸಹಾಯವಾಣಿ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ಬೆಳಗ್ಗೆ 8.30ರಿಂದ ಸಂಜೆ 5.30ರವರೆಗೆ 08537–270122 ಸಂಖ್ಯೆಗೆ ಕರೆಮಾಡಿ ಸಮಸ್ಯೆಗಳನ್ನು ತಿಳಿಸಬಹುದು ಎಂದರು. ಟಾಸ್ಕ್ ಫೋರ್ಸ್ ಸಭೆಗಳನ್ನು ನಿರಂತರವಾಗಿ ನಡೆಸಲಾಗುತ್ತಿದ್ದು, ಯಾವುದೇ ಗ್ರಾಮದಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ನಿಗಾವಹಿಸಲಾಗಿದೆ. ಕೆರೆಗಳಲ್ಲಿರುವ ನೀರಿನ ಪ್ರಮಾಣ, ಬೋರ್‌ವೆಲ್‌ಗಳ ಲಭ್ಯತೆ ಕುರಿತು ಮಾಹಿತಿ ಪಡೆದು, ಅಗತ್ಯವಿದ್ದರೆ ಬಾಡಿಗೆ ಬೋರ್‌ವೆಲ್‌ಗಳನ್ನು ಬಳಸುವಂತೆ ಸೂಚನೆ ನೀಡಲಾಗಿದೆ. ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯೂ ಕಡ್ಡಾಯ ಎಂದು ತಿಳಿಸಿದರು.ಸಭೆಯಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ್, ತಹಸೀಲ್ದಾರ್ ಮಂಜುನಾಥ ಭೋಗಾವತಿ, ಮಾನ್ವಿ, ಸಿಂಧನೂರು, ಲಿಂಗಸುಗೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಇಂಜಿನಿಯರ್‌ಗಳು ಹಾಗೂ ವಿವಿಧ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು. ವರದಿ: ಸುರೇಶ್ ಬಳಗಾನೂರು

## ಸಾಹಿತ್ಯ ಸಿಂಚನ

**ಮಮತೆ ಮಡಿಲು**

ಉಸಿರುಗಟ್ಟಿಸಿದೆ ನೀರಿನ ಮಮತೆ ಮಡುಗಿನಲಿ
ತೇಲುವ ಹಡಗು ಮುಳುಗಿತೆ ಪಾತಾಳದಲಿ..?

ಅಲೆಗಳ ಸುಳಿಯ ಸದ್ದಿಗೆ ನಿಮ್ಮಪ್ಪನ ಧೈರ್ಯ ನಮಗಿಲ್ಲ ಕಂದಮ್ಮ
ನಿನ್ನೊಂದಿಗೆ ನಾನು ಜೊತೆಯಾಗುವಿನಮ್ಮ

ದೂರ ತೀರದ ಕಡಲಿನಾಚೆಯ ಕನಸು ಒಡೆದು ಹೋಯಿತು
ಅಮ್ಮ ಎನ್ನುವ ಬಾಯಿಗೆ ನೀರುತುಂಬಿ
ಉಸಿರುಗಟ್ಟಿ ಜೀವ ಹೋಯಿತು

ಉಸಿರುಕೊಟ್ಟು ಹೆಸರನಿಟ್ಟು ಆಶಯಹೊತ್ತು ಬಿಗಿದಬ್ಬಿದವಳು
ಈಜು ಬಾರದೆ ನಿನ್ನೊಳಿಸಲು ಕರುಳು ಧ್ವನಿ ಕೂಗಿ ಬೇಡಿಕೊಂಡಿತು.

ನೀರಜೀವಿಗೂ ಕಣ್ಣೀರು ಬರುವ ಹಾಗೆ ಮಿಡಿದಿವೆ ಮನಗಳು
ತಾಯಿ ಮಡಿಲಲ್ಲಿ ಜೀವಕೊಟ್ಟು
ಸೆರಗಿನಂಚಲಿ ಜೀವವ ಕಸಿದೆಯಾ..!

ಕರುಣೆ ಬಾರದೆ ವಿಧಿರಾಯ ಸ್ವಲ್ಪ ತಡವಾಗಿ ಬರೆಯಬಾರದೆ ಹಣೆಬರಹ
ಕೂಗಿದ ಧ್ವನಿ ಅಳುವ ಕಂದನ ಆಕ್ರಂದನವು ನೀರುನುಂಗಿ ಕಥೆ ಮುಗಿಸಿದಿಯಾ..!

ಶ್ರೀ ಹೆಚ್.ಎಂ.ಶ್ರೀಶೈಲ
ಉಪನ್ಯಾಸಕರು ಸಿಂಧನೂರು.

# 14 ವರ್ಷದ ಹೆಣ್ಣು ಮಕ್ಕಳಿಗೆ ಹೆಚ್‌ಪಿಇ ಲಸಿಕೆ

ನೈಜ್ಯ ದೆಸೆ ನ್ಯೂಸ್

**ಮುದಗಲ್ಲ: ನಮಗೆ ಕಂಡುಬರುವ ಖಾಯಿಲೆಗಳಿಗೆ ರೋಗ ಯಾವುದು ಹಾಗೂ ಅದಕ್ಕೆ ಯಾವ ಚಿಕಿತ್ಸೆ ನೀಡಬೇಕು ಎಂದು ನಿರ್ಧ-ರಿಸುವವರು ವೈದ್ಯರೆ ಹೊರತು, ಸಾಮಾಜಿ-ಕ ಜಾಲತಾಣಗಳಲ್ಲಿ ತಾವೇ ವೈದ್ಯರಂತೆ ಬಿಂಬಿಸಿಕೊಂಡು ತಪ್ಪು ಮಾಹಿತಿ ನೀಡುವವರಲ್ಲ,**

ಈ ದಿಶೆಯಲ್ಲಿ ಭವಿಷ್ಯದಲ್ಲಿ ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ನೆಮ್ಮದಿಯ ಜೀವನ ನಡೆಸಲು ಪ್ರಸ್ತುತ 14 ವರ್ಷದ ಹೆಣ್ಣು ಮಕ್ಕಳಿಗೆ ಹಾಕಲಾಗುವ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೆ ಹಿಂದೇಟು ಹಾಕದೆ ನಿಮ್ಮ ಮಗಳ ಸುರಕ್ಷತೆಗಾಗಿ ಉಚಿತವಾಗಿ ಹಾಕಿಸಿ ಎಂದು ಮುದಗಲ್ಲ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ ಚಂದ್ರಕಾಂತ ತಿಳಿಸಿದರು. ರಾಯಚೂರು ಜಿಲ್ಲಾಡಳಿತ, ಜಿಲ್ಲಾ



ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮುದಗಲ್ಲ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತಾಯಂದಿರಿಗೆ ಜಾಗೃತಿ ನೀಡಿ ಮಾತನಾಡುತ್ತಾ, ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ ಗರ್ಭಕಂಠದ ಕ್ಯಾನ್ಸರ್ ತಡೆಗೆ ಈ ಲಸಿಕೆ ಅತ್ಯಂತ ಉಪಯುಕ್ತವಾಗಿದ್ದು, ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ವೈದ್ಯರಲ್ಲದವರು ಹರಡಿಸುವ ತಪ್ಪು ಮಾಹಿತಿ ನಂಬದೆ, ಅನಗತ್ಯ ತಪ್ಪು ಮಾಹಿತಿಗಳಿಗೆ ಕಿವಿಗೊಡದೆ, 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತ ಹೆಚ್.ಪಿ.ವಿ (ಹೂಮನ್ ಪ್ಯಾಪಿಲೋಮ ವೈರಸ್) ವಿರುದ್ಧದ ಲಸಿಕೆ ತಪ್ಪದೆ ಹಾಕಿಸಿ. ಅಲ್ಲದೆ ಪೋಷಕರು ತಮ್ಮ ಇದಕ್ಕಾಗಿ ತಮ್ಮ ಮಗಳನ್ನು ತಪ್ಪದೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಉಚಿತವಾಗಿ ಲಸಿಕೆ ಹಾಕಿಸಲು ಕೋರಿದರು.

ಗರ್ಭಕಂಠದ ಕ್ಯಾನ್ಸರ್ ಉಂಟಾಗುವ ಕಾರಣಗಳು: ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹೂಮನ್ ಪ್ಯಾಪಿಲೋಮ ವೈರಸ್ (ಹೆಚ್.ಪಿ.ವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆಗಳಾಗಿ ಕ್ಯಾನ್ಸರ್ ಆಗಿ ಬದಲಾಗುತ್ತದೆ. ಈ ಹಿನ್ನಲೆಯಲ್ಲಿ ಮಾರಕವಾಗುವುದನ್ನು ತಡೆಯಲು ಹೆಚ್.ಪಿ.ವಿ ಲಸಿಕೆಯು ಸೂಕ್ತವಾಗಿದೆ. ಈ ಸಂದರ್ಭದಲ್ಲಿ ಹಿರಿಯ ವೈದ್ಯಡಾ ಅನಂತಕುಮಾರ್, ದಂತ ತಜ್ಞೆ ಡಾ ಗೀತಾಂಜಲಿ, ಆಯುಷ್ಯ ವೈದ್ಯ ಡಾ ವಿನೋದ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಾರದಾ, ಆರ್‌ಕೆಎಸ್‌ಕೆ ಕೌನ್ಸಲರ್ ಗೌರಮ್ಮ, ಆಶಾ ಕಾರ್ಯಕರ್ತೆ ಸೇರಿದಂತೆ ತಾಯಂದಿರು ಸಾರ್ವಜನಿಕರು ಉಪಸ್ಥಿತರಿದ್ದರು.

# ಬಡವರ ಜೊತೆಗೆ ಸದಾಕಾಲ ನಿಲ್ಲುವ ದಿಟ್ಟ ನಾಯಕ, ಹಂಪನಗೌಡ ಬಾದರ್ಲಿ



ನೈಜ್ಯ ದೆಸೆ ನ್ಯೂಸ್

ಸಿಂಧನೂರಿನಲ್ಲಿ ತೆರವುಗೊಳಿಸಲ್ಪಟ್ಟ ಬೀದಿಬದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ, ಜನಪರ ಚಿಂತನೆ ಹೊಂದಿರುವ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಅವರ ನೇತೃತ್ವದಲ್ಲಿ ವ್ಯಾಪಾರಿಗಳ ನಿಯೋಗವು ಇಂದು ಬೆಂಗಳೂರಿನಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಸಮಗ್ರ ಚರ್ಚೆ ನಡೆಸಿತು.

ನಗರ ಅಭಿವೃದ್ಧಿಯ ಹೆಸ-ರಿನಲ್ಲಿ ಜೀವನೋಪಾಯ ಕಳೆದುಕೊಂಡ ಬೀದಿಬದಿ ವ್ಯಾಪಾರಿಗಳ ಸಂಕಷ್ಟವನ್ನು ವಿವರಿಸಿದ ನಿಯೋಗವು, ಅವ-ರಿಗೆ ಶಾಶ್ವತ ವ್ಯಾಪಾರ ಸ್ಥಳ, ಮೂಲಭೂತ ಸೌಲಭ್ಯಗಳು ಹಾಗೂ ಕಾನೂನುಬದ್ಧ ರಕ್ಷಣೆ ಒದಗಿಸುವಂತೆ ಮನವಿ ಸಲ್ಲಿಸಿತು. ವ್ಯಾಪಾ-ರಿಗಳ ಸಮಸ್ಯೆಗಳನ್ನು ಸಹಾನುಭೂತಿಯಿಂದ ಆಲಿಸಿದ ಮುಖ್ಯಮಂತ್ರಿಗಳು, ಸಂಬಂಧಿತ ಇಲಾಖೆಗಳೊಂದಿಗೆ ಚರ್ಚಿಸಿ ಶೀಘ್ರದಲ್ಲೇ ಸೂಕ್ತ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದರು.

ಬಡವರು, ಸಣ್ಣ ವ್ಯಾಪಾರಿಗಳು ಮತ್ತು ದುಡಿಯುವ ವರ್ಗದ ಹಕ್ಕುಗಳಿಗಾಗಿ ಸದಾ ಹೋರಾಟ ನಡೆಸುತ್ತಿರುವ ಶಾಸಕ ಹಂಪನಗೌಡ ಬಾದರ್ಲಿ ಅವರ ಈ ಕ್ರಮಕ್ಕೆ ವ್ಯಾಪಾರಿಗಳ ವಲಯದಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎ. ವಸಂತಕುಮಾರ್, ತೋಟಗಾ-ರಿಕೆ ಇಲಾಖೆಯ ನಿರ್ದೇಶಕರು, ಸಂಬಂಧಿತ ಅಧಿಕಾರಿಗಳು ಹಾಗೂ ಮುಖಂಡರಾದ ರಾಜುಗೌಡ ಬಾದರ್ಲಿ, ಎನ್. ಅಮರೇಶ, ಹಾರೂಣ್ ಸಾಹೇಬ್ ಜಾಗಿರ್ದಾರ್ ಸೇ-ರಿದಂತೆ ಬೀದಿಬದಿ ವ್ಯಾಪಾರಿಗಳ ಹೋರಾಟ ಸಮಿತಿಯ ಎಲ್ಲಾ ಮುಖಂಡರು, ಸದಸ್ಯರು ಹಾಗೂ ಹಲವರು ಉಪಸ್ಥಿತರಿದ್ದರು. ವ್ಯಾಪಾರಿಗಳ ಹಿತಾಸಕ್ತಿಯನ್ನು ಕಾಪಾಡುವ ದಿಸೆಯಲ್ಲಿ ಸರ್ಕಾರ ಮತ್ತು ಜನಪ್ರತಿನಿಧಿಗಳು ಕೈಜೋಡಿಸಿರುವುದು ಸಿಂಧನೂರು ನಗರದ ಸಾವಿರಾರು ಸಣ್ಣ ವ್ಯಾಪಾ-ರಿಗಳಿಗೆ ಹೊಸ ಭರವಸೆ ಮೂಡಿಸಿದೆ.

## ಪ್ರಧಾನಿ ಮೋದಿ ಭಾನುವಾರ ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ.

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮೇ 10 (ಭಾನುವಾರ) ಬೆಂಗಳೂರಿಗೆ ಆಗಮಿಸಲಿದ್ದಾರೆ. ಪ್ರಧಾನಿ ಮೋದಿ ಅವರು ನಗರದ ಆರ್ಟ್ ಆಫ್ ಲಿವಿಂಗ್‌ನ ಗುರುದೇವ್ ರವಿಶಂಕರ್ ಅವರೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ಹೀಗಾಗಿ, ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರ ಆರ್ಟ್ ಆಫ್ ಲಿವಿಂಗ್‌ನ 45 ನೇ ವಾರ್ಷಿಕೋತ್ಸವ ಮತ್ತು ರವಿಶಂಕರ್ ಗುರೂಜಿ ಅವರ 70 ನೇ ಜನ್ಮದಿನಾಚರಣೆ ಮೇ 10 ರಂದು ನಡೆಯಲಿದೆ.**



ನಗರದ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ಆಗಮಿಸಲಿದ್ದಾರೆ. ಅದೇ ಸಮಯದಲ್ಲಿ, ಆಶ್ರಮದ ಆವರಣದಲ್ಲಿ ನಿರ್ಮಿಸಲಾದ ಹೊಸ ಧ್ಯಾನ ಮಂದಿರವನ್ನು ಉದ್ಘಾಟಿಸಲಾಗುವುದು ಮತ್ತು ಧ್ಯಾನ ಮಂದಿರದ ಅನಾವರಣದೊಂದಿಗೆ ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುವುದು, ಇದು ಹಲವು ವಿಶೇಷ ಲಕ್ಷಣಗಳನ್ನು ಹೊಂದಿದೆ. ಆರ್ಟ್ ಆಫ್ ಲಿವಿಂಗ್‌ನ ಹೊಸ ಧ್ಯಾನ ಕೇಂದ್ರವು ವಾರ್ಲಿ, ಮಧುಬನಿ, ಪಟ್ಟಚಿಟ್ಟಾ, ತಂಜಾವೂರು, ಸೊಹ್ರಾ, ಕೊಹ್ಬಾರ್, ಗೊಂಡ್ ಮತ್ತು ಪಿಚ್‌ವೈ ಕಲಾ ಪ್ರಕಾರಗಳನ್ನು ಬಳಸುತ್ತದೆ ಮತ್ತು ಇಂದಿನಿಂದ ಧ್ಯಾನಕ್ಕೆ ಮುಕ್ತವಾಗಿರುತ್ತದೆ. ಮಾನಸಿಕ ಮತ್ತು ಆಧ್ಯಾತ್ಮಿಕ ಸಾಧನೆಗಳ ಮೂಲಕ ಜನರನ್ನು ಮುನ್ನಡೆಸುತ್ತಿರುವ ಆರ್ಟ್ ಆಫ್ ಲಿವಿಂಗ್ 45 ವರ್ಷಗಳನ್ನು ಪೂರೈಸುತ್ತಿದ್ದು, ಮೇ 10 ರಿಂದ 25 ರವರೆಗೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಿದೆ. ವಿವಿಧ ಕ್ಷೇತ್ರಗಳ ಗಣ್ಯರು ಈ ಆಚರಣೆಯಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ಮೋದಿ ಈ ಹಿಂದೆ ವಿಶ್ವ ಸಾಂಸ್ಕೃತಿಕ ಉತ್ಸವದಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪ್ರಚಾರ ಮಾಡುವಲ್ಲಿ ರವಿಶಂಕರ್ ಅವರ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು. ಈ ಭೇಟಿ ಕೇವಲ ಶುಭಾಶಯಗಳಿಗೆ ಸೀಮಿತವಾಗಿರುವುದಿಲ್ಲ, ಆದರೆ ಸಮುದಾಯದ ಯೋಗಕ್ಷೇಮಕ್ಕಾಗಿ ವಿನ್ಯಾಸಗೊಳಿಸಲಾದ ಹಲವಾರು ಸೇವಾ ಕಾರ್ಯಕ್ರಮಗಳನ್ನು ಪ್ರಧಾನಿ ಮೋದಿ ಉದ್ಘಾಟಿಸಲಿದ್ದಾರೆ. ತನ್ನ 45 ವರ್ಷಗಳ ಪ್ರಯಾಣದಲ್ಲಿ, ಆರ್ಟ್ ಆಫ್ ಲಿವಿಂಗ್ ಯೋಗ ಮತ್ತು ಧ್ಯಾನದಲ್ಲಿ ಮಾತ್ರವಲ್ಲದೆ ನದಿ ಪುನರುಜ್ಜೀವನ, ಶೈಕ್ಷಣಿಕ ಅಭಿವೃದ್ಧಿ ಮತ್ತು ವಿಪತ್ತು ನಿರ್ವಹಣೆಯಂತಹ ಕ್ಷೇತ್ರಗಳಲ್ಲಿಯೂ ಗಮನಾರ್ಹ ಬದಲಾವಣೆಯನ್ನು ತಂದಿದೆ. 150 ಕ್ಕೂ ಹೆಚ್ಚು ದೇಶಗಳಲ್ಲಿ ಹರಡಿರುವ ಈ ಸಂಸ್ಥೆಯು ಮಾನವ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

# ಮಹಿಳಾ ಸಬಲೀಕರಣದ ಹೆಜ್ಜೆಗೆ ರೆಕ್ಕೆ: ಕುಕ್ಕುಟ ಸಂಜೀವಿನಿ ಯೋಜನೆಗೆ ಡಾ. ಟಿ. ರೋಣಿ ಮೆಚ್ಚುಗೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ವಟಗಲ್ ಗ್ರಾಮ ಪಂಚಾಯತಿಗೆ ಮಸ್ಕಿ ತಾಲೂಕ ಪಂಚಾಯ್ತಿ ಆಡಳಿತಾಧಿಕಾ-ರಿಗಳು ಹಾಗೂ ರಾಯಚೂರು ಜಿಲ್ಲಾ ಪಂಚಾಯ್ತಿ ಮುಖ್ಯ ಯೋಜನಾಧಿಕಾರಿಗಳಾದ ಡಾಕ್ಟರ್.ಟಿ. ರೋಣಿ ಅವರು ಬುಧವಾರ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿದರು.**

ಗ್ರಾಮ ಪಂಚಾಯತಿಯಲ್ಲಿ ಸಿಬ್ಬಂದಿ ಹಾಜರಾತಿ ವಹಿ ಪರಿಶೀಲಿಸಿದ ಅವರು, ತೆರಿಗೆ ವಸೂಲಾತಿ ಹಾಗೂ ಆಸ್ತಿ ಸಮೀಕ್ಷೆಯ ಪ್ರಗತಿ ಕುರಿತು ಮಾಹಿತಿ ಪಡೆದರು. ಬಳಿಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಇಂಜಿನಿಯರ್‌ರೊಂದಿಗೆ ಜೆಜೆಎಂ ಯೋಜನೆ ಅನುಷ್ಠಾನದ ಬಗ್ಗೆ ಸಭೆ ನಡೆಸಿದರು. ನಂತರ ಗುಡಿಹಾಳ ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಕೆರೆಗೆ ಭೇಟಿ ನೀಡಿ



ಮಾಹಿತಿ ಕಲೆಹಾಕಿದರು.ಅನಂತರ ಮೆದಕಿನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾಗರಬೆಂಚಿ ಗ್ರಾಮದಲ್ಲಿ ಜ್ಯೋತಿ ಸಂಜೀವಿನಿ ಸ್ವ ಸಹಾಯ ಗುಂಪಿನ ಮಹಿಳೆಯರು ಕುಕ್ಕುಟ ಸಂಜೀವಿನಿ ಯೋಜನೆಯಡಿ ಆರಂಭಿಸಿದ ಕೋಳಿ ಫಾರಂಗೆ ಭೇಟಿ ನೀಡಿದರು.

ಮಹಿಳಾ ಸಬಲೀಕರಣದ ಉದ್ದೇಶದಿಂದ ಆರಂಭವಾದ ಈ ಯೋಜನೆಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗುತ್ತಿದೆ.ಈ ಯೋಜನೆಯಲ್ಲಿ ತೊಡಗಿರುವ ಮಹಿಳೆಯರನ್ನು ಕೇಂದ್ರ ಸರ್ಕಾರದ ವತಿಯಿಂದ ದೆಹಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಶಿಫಾರಸು ಮಾಡುವುದಾಗಿ ಡಾಕ್ಟರ್. ರೋಣಿ ತಿಳಿಸಿದರು. ಅಲ್ಲದೆ, ಫಾರಂನಲ್ಲಿ ಉತ್ಪಾದನೆಯಾಗುವ ಮೊಟ್ಟೆಗಳನ್ನು ಸ್ಥಳೀಯ ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ ಪೂರೈಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು. ಸ್ವ ಸಹಾಯ ಗುಂಪಿನ ಮಹಿಳೆಯರು ಕೋಳಿ ಫಾರಂ ಅನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು.

ಬೇಸಿಗೆಯ ತೀವ್ರ ಬಿಸಿಲಿನ ಹಿನ್ನೆಲೆ ಕೋಳಿಗಳ ಆರೈಕೆಗೆ ಹೆಚ್ಚಿನ ಗಮನ ನೀಡಬೇಕು. ಪಶುವೈದ್ಯರ ಸಲಹೆಯಂತೆ ಶೆಡ್‌ಗಳನ್ನು ತಂಪಾಗಿಡುವ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕ ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ, ಎನ್‌ಆರ್‌ಎಲ್‌ಎಂ ಸಿಬ್ಬಂದಿಗಳಾದ ಈರಪ್ಪ ಗುರಿಕಾರ, ಪ್ರಕಾಶ ಸೇರಿದಂತೆ ಗ್ರಾಮ ಪಂಚಾಯತಿ ಸಿಬ್ಬಂದಿ ಉಪಸ್ಥಿತ-ರಿದ್ದರು. **ವರದಿ: ಸುರೇಶ ಬಳಗಾನೂರು**

# ‘ಕನ್ನಡ ನಾಡು, ನುಡಿ ರಕ್ಷಣೆ ಎಲ್ಲರ ಹೊಣೆ’

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿ ಮಂಗಳವಾರ ಕಸಾಪ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ‘ನಾಡಿನ ನೆಲ, ಜಲ ಹಾಗೂ ಭಾಷೆಯ ಸಂರಕ್ಷಣೆ ಪ್ರತಿಯೊಬ್ಬ ಕನ್ನಡಿಗರ ಹೊಣೆ ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜನಜಾಗೃತಿ ಮೂಡಿಸುವ ಚಟುವಟಿಕೆಗಳು ಶ್ಲಾಘನೀಯ’ ಎಂದು ಡಾ.ಅಂಬಿಕಾ ಮಧುಸೂದನ್ ಹೇಳಿದರು.**

ಪಟ್ಟಣದ ಪತ್ರಿಕಾ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ





ಉದ್ಘಾಟಿಸಿ ಅವರು ಮಾತನಾಡಿದರು. ‘ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರಿ ಶಾಲೆಗಳ ಉಳಿವಿಗೆ ಮುತುವರ್ಜಿ ವಹಿಸಿ ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸಬೇಕು’ ಎಂದು ಅವರು ಸಲಹೆ ನೀಡಿದರು. ಪತ್ರಕರ್ತ ಬಸವರಾಜ ಭೋಗಾವತಿ, ‘ನಾಡಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆ ಹಾಗೂ ಸಾಹಿತ್ಯ ಕ್ಷೇತ್ರದ ಮಹತ್ವ’ ಕುರಿತು ವಿಶೇಷ ಉಪನ್ಯಾಸ ನೀಡಿದರು. ತಾಲೂಕಿನಲ್ಲಿ ಎಸ್-ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಗಳಿಸಿದ 32 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಗಡಿ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಯೋಧ ಮಲ್ಲಯ್ಯ ನಾಯಕ ದೇವಿಪುರ ಅವರನ್ನು ಸನ್ಮಾನಿಸಲಾಯಿತು.

ಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಜಿಲ್ಲಾ ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು, ಸಂಘಟನಾ ಕಾರ್ಯದರ್ಶಿ ಯಂಕಣ್ಣ ಯಾದವ್, ವಕೀಲ ಗೋವಿಂದರಾಜ್ ನಾಯ್ಕ್, ಪ್ರಾಧ್ಯಾಪಕ ಸೈಯದ್ ಮುಜೀಬ್ ಅಹ್ಮದ್, ಬಿವಿಆರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ವಿ.ರೆಡ್ಡಿ, ಪ್ರಗತಿಪರ ಚಿಂತಕಿ ನಾಗರತ್ನಮ್ಮ ಪಾಟೀಲ ಬೆಟ್ಟದೂರು,ಕಸಾಪ ತಾಲ್ಲೂಕು ಘಟಕದ ಪದಾಧಿಕಾರಿಗಳಾದ ಲಕ್ಷ್ಮಣ ಜಾನೇಕಲ್, ಜಿ.ಎಸ್. ಬಾಲಾಜಿ ಸಿಂಗ್, ಮಂಜುನಾಥ ಕಮತರ, ಚನ್ನಬಸವ ಮಾಡಗಿರಿ, ಕವಯತ್ರಿ ಅಂಬಮ್ಮ ಪ್ರತಾಪ ಸಿಂಗ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಜಿಬಿಎ ಚುನಾವಣೆಗಳು: ಮೇ 8 ರಂದು ಮಹತ್ವದ ಆಯೋಗದ ಸಭೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಗಳಿಗೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆ ಕಂಡುಬಂದಿದೆ. ಚುನಾವಣೆಯ ದಿನಾಂಕ ನಿಗದಿಪಡಿಸುವ ಪ್ರಕ್ರಿಯೆಯು ಈಗ ಅಂತಿಮ ಹಂತವನ್ನು ತಲುಪಿದ್ದು, ರಾಜ್ಯ ಚುನಾವಣಾ ಆಯೋಗವು ಮೇ 8 ರಂದು ಮಹತ್ವದ ಸಭೆ ಕರೆದಿದೆ.**

ಜಿಬಿಎ ಕಾಯ್ದೆಯ ಸೆಕ್ಷನ್ 34(4) ರ ಪ್ರಕಾರ, ಪ್ರಾಧಿಕಾರದ ಸದಸ್ಯರೊಂದಿಗೆ ಸಮಾಲೋಚಿಸಿದ ನಂತರ ಚುನಾವಣಾ ದಿನಾಂಕವನ್ನು ನಿಗದಿಪಡಿಸುವುದು ಕಡ್ಡಾಯವಾಗಿದೆ. ಈ ಸಂದರ್ಭದಲ್ಲಿ, ಮೇ 8 ರಂದು ವಿಧಾನಸೌಧದಲ್ಲಿ ಎಲ್ಲಾ ಜಿಬಿಎ ಸದಸ್ಯರ ಸಭೆಯನ್ನು ಆಯೋಜಿಸಲಾಗಿದೆ.




ವಾರ್ಡ್ ವಿಭಜನೆ, ಮೀಸಲಾತಿ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ ಮತ್ತು ಆಯೋಗವು ಚುನಾವಣೆಗೆ ಅಗತ್ಯವಾದ ಸಿದ್ಧತೆಗಳನ್ನು ಪೂರ್ಣಗೊಳಿಸಿದೆ. ಜಿಬಿಎ ಸಭೆಗೆ ಸಂಬಂಧಿಸಿದ ಮಾಹಿತಿಯನ್ನು ಈಗಾಗಲೇ ಜಿಬಿಎ ಸದಸ್ಯರಿಗೆ ನೀಡಲಾಗಿದೆ. ಒಟ್ಟು 86 ಸದಸ್ಯರನ್ನು ಒಳಗೊಂಡಿರುವ ಸಮಿತಿಯಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಜಿಬಿಎ ಮುಖ್ಯ ಆಯುಕ್ತರು, ಐದು ಪುರಸಭೆ ಆಯುಕ್ತರು, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳ ಶಾಸಕರು, ಲೋಕಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಸೇರಿದಂತೆ ಇತರ ಅಧಿಕಾ-ರಿಗಳು ಸೇರಿದ್ದಾರೆ. ಶಾಸಕರು ಸೇರಿದ್ದಾರೆ. ಸಭೆಯಲ್ಲಿ ಸದಸ್ಯರ ಸಲಹೆಗಳು ಮತ್ತು ವಿನಂತಿಗಳನ್ನು ಸ್ವೀಕರಿಸಿದ ನಂತರ, ಚುನಾವಣಾ ದಿನಾಂಕವನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ. ಜಿಬಿಎ ಚುನಾವಣೆಗೆ ಸಂಬಂಧಿಸಿದ ಭವಿಷ್ಯದ ನಿರ್ದೇಶನವನ್ನು ಈ ಸಭೆಯಲ್ಲಿಯೇ ನಿರ್ಧ-ರಿಸುವ ನಿರೀಕ್ಷೆಯಿದೆ. ಚುನಾವಣಾ ಆಯೋಗವು ಜೂನ್‌ನಲ್ಲಿ ಈಗಾಗಲೇ ಎರಡು ದಿನಾಂಕಗಳನ್ನು ನಿಗದಿಪಡಿಸಿದೆ. ಸಭೆಯಲ್ಲಿ ದಿನಾಂಕ ನಿಗದಿಯ ಬಗ್ಗೆ ಮಾಹಿತಿ ಲಭ್ಯವಿದೆ.

ಒಟ್ಟಾರೆಯಾಗಿ, ಮೇ 8 ರಂದು ನಡೆಯಲಿರುವ ಈ ಸಭೆಯು ಜಿಬಿಎ ಚುನಾವಣೆಗಳ ದಿಕ್ಕನ್ನು ತೋರಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಹೇಳಬಹುದು. ಜಿಬಿಎ ಚುನಾವಣೆಯ ದಿನಾಂಕವನ್ನು ಅದೇ ದಿನ ನಿಗದಿಪಡಿಸುವ ಸಾಧ್ಯತೆಯಿದೆ. 66 ಕೋಟಿ ರೂ.ಗಳ ಚುನಾವಣಾ ವೆಚ್ಚದ ಬಗ್ಗೆ ಸರ್ಕಾರಕ್ಕೆ ಈಗಾಗಲೇ ತಿಳಿಸಲಾಗಿದೆ. ಚುನಾವಣಾ ಕೆಲಸಕ್ಕಾಗಿ ಸುಮಾರು 6,000 ಸಿಬ್ಬಂದಿಯನ್ನು ನೇಮಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಭೆಯು ಚುನಾವಣೆಗೆ ಹಸಿರು ನಿಶಾನೆ ತೋರಿಸಿದರೆ, ಚುನಾವಣಾ ಆಯೋಗವು ಜಿಬಿಎ ಚುನಾವಣೆಗೆ ದಿನಾಂಕವನ್ನು ನಿಗದಿಪಡಿಸುತ್ತದೆ ಮತ್ತು ಮೇ ಮೂರನೇ ವಾರದಲ್ಲಿ ಅಧಿಸೂಚನೆಯನ್ನು ಹೊರಡಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ನೇಮಕಾತಿ ಪ್ರಕಟಣೆ

NIT ಕರ್ನಾಟಕ ನೇಮಕಾತಿ 2026–84 ಫ್ಯಾಕಲ್ಟಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 6, 2026 NIT ಕರ್ನಾಟಕ ನೇಮಕಾತಿ 2026: 84 ಫ್ಯಾಕಲ್ಟಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕವು ಮೇ 2026 ರ ಓಖಖಿ ಕರ್ನಾಟಕ ಅಧಿಕೃತ ಅಧಿಸೂಚನೆಯ ಮೂಲಕ ಫ್ಯಾಕಲ್ಟಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಕ್ಷಿಣ ಕನ್ನಡ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 02–ಜೂನ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 04–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02–ಜೂನ್–2026 ಅಧಿಕೃತ ವೆಬ್‌ಸೈಟ್: nitk.ac.in

# ಬೀದಿ ಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿ ಅವರ ಹಕ್ಕುಗಳನ್ನು ಕಿತ್ತಿಕೊಳ್ಳುವ ಪ್ರಯತ್ನದ ಹುನ್ನಾರ!

**ನೈಜ್ಯ ದೆಸೆ ನ್ಯೂಸ್**

**ನಗರಸಭೆ ಅಧಿಕಾರಿಗಳು ಯಾವುದೇ ಕಾನೂನು ಕ್ರಮಗಳನ್ನು ಅನುಸರಿಸದೆ ನೂರಾರು ಬೀದಿ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಿರುವುದು ಗಮನಕ್ಕೆ ಬಂದಿದೆ. ಇದರಿಂದ ಬಡ ಕಾರ್ಮಿಕ ಕುಟುಂಬಗಳಿಗೆ ಜೀವನೋಪಾಯದ ಗಂಭೀರ ಹಾನಿ ಉಂಟಾಗಿದೆ. ಎಂದು ನಗರಸಭೆ ಆಯುಕ್ತರಿಗೆ ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಂ–ಯಾ ಪ್ರಧಾನ ಕಾರ್ಯದರ್ಶಿ ಆರ್. ಮಾನಸಯ್ಯ ಅವರು ಪತ್ರ ಬರೆದಿದ್ದಾರೆ.**

ಕಾನೂನು ಸ್ಥಿತಿ: 2014ರ ಬೀದಿ ವ್ಯಾಪಾರಿಗಳ (ಜೀವನೋಪಾಯ ರಕ್ಷಣೆಯ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ ಸರಿಯಾದ ಸಮೀಕ್ಷೆ ನಡೆಸದೆ ಹಾಗೂ



ವ್ಯಾಪಾರ ಪ್ರಮಾಣಪತ್ರ ಗುರುತಿನ ಚೀಟಿ ನೀಡದೆ ಯಾವುದೇ ಬೀದಿ ಬದಿಯ ವ್ಯಾಪಾ–ರಿಯನ್ನು ತೆರವುಗೊಳಿಸಲಾಗುವುದಿಲ್ಲ. ಬೀದಿ ವ್ಯಾಪಾರಿಗಳ ಪ್ರತಿನಿಧಿತ್ವದೊಂದಿಗೆ ಟೌನ್ ವೆಂಡಿಂಗ್ ಸಮಿತಿ (ಟಿವಿಸಿ) ರಚಿಸಬೇಕು. 30 ದಿನಗಳ ಪೂರ್ವ ನೋಟಿಸ್ ನೀಡದೆ ಯಾವುದೇ ತೆರವು ಅಥವಾ ಸ್ಥಳಾಂತರ ಮಾಡಬಾರದು. ಯಾವುದೇ ತೆರವುಗೊಳಿಸುವ ಮೊದಲು ವ್ಯಾಪಾ–ರಿಗಳಿಗೆ ನಿಗದಿತ ವ್ಯಾಪಾರ ವಲಯಗಳು ಅಥ–'ವಾ ಪರ್ಯಾಯ ವ್ಯವಸ್ಥೆಗಳನ್ನು ಒದಗಿಸಬೇಕು. ನಗರಸಭೆಯ ಪ್ರಸ್ತುತ ಕ್ರಮಗಳು ಮೇಲ್ಕಂಡ ಕಾನೂನು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿವೆ.


ನಮ್ಮ ಬೇಡಿಕೆಗಳು: ಸಿಂಧನೂರಿನಲ್ಲಿ ಬೀದಿ ವ್ಯಾಪಾರಿಗಳ ಮೇಲೆ ನಡೆಯುತ್ತಿರುವ ಎಲ್ಲಾ ತೆರವು ಕ್ರಮಗಳನ್ನು ತಕ್ಷಣ ನಿಲ್ಲಿಸಬೇಕು. ಕಾಯ್ದೆಯ ಪ್ರಕಾರ ಬೀದಿ ವ್ಯಾಪಾರಿಗಳ ಸಮರ್ಪಕ ಪ್ರತಿನಿಧಿತ್ವದೊಂದಿಗೆ ಟೌನ್ ವೆಂಡಿಂಗ್ ಸಮಿತಿ ರಚಿಸಬೇಕು. ಎಲ್ಲಾ ಬೀದಿ ವ್ಯಾಪಾರಿಗಳ ಸಮಗ್ರ ಸಮೀಕ್ಷೆ ನಡೆಸಬೇಕು. ಅರ್ಹ ವ್ಯಾಪಾರಿಗಳಿಗೆ ವ್ಯಾಪಾರ ಪ್ರಮಾಣಪತ್ರ ಹಾಗೂ ಗುರುತಿನ ಚೀಟಿಗಳನ್ನು ನೀಡಬೇಕು. ತೆರವುಗೊಳಿಸಲ್ಪಟ್ಟ ಎಲ್ಲಾ ವ್ಯಾಪಾ–ರಿಗಳಿಗೆ ತಮ್ಮ ಮೂಲ ಸ್ಥಳಗಳಲ್ಲಿ ಅಥವಾ ಸೂಕ್ತ ಪರ್ಯಾಯ ಸ್ಥಳಗಳಲ್ಲಿ ವ್ಯಾಪಾರಸ್ಥರು ವ್ಯಾಪಾರ ಪುನರಾರಂಭಿಸಲು ಅವಕಾಶ ನೀಡಬೇಕು.

ನಗರಸಭೆ ಮತ್ತು ಪೊಲೀಸರ ಹಿಂಸಾಚಾರದಿಂದ ರಕ್ಷಣೆ ಒದಗಿಸಬೇಕು. ಬೀದಿ ವ್ಯಾಪಾರವು ಸಾವಿರಾರು ಬಡ ಕುಟುಂಬಗಳ ಜೀವನೋಪಾಯವಾಗಿದೆ. ಕಾನೂನು ಪ್ರಕ್ರಿಯೆಗಳನ್ನು ಅನುಸರಿಸದೆ ತೆಗೆದುಕೊಳ್ಳುವ ಯಾವುದೇ ಕ್ರಮವು ಭಾರತದ ಸಂವಿಧಾನದ ವಿಧಿ 21 ಅಡಿಯಲ್ಲಿ ಖಚಿತಪಡಿಸಿರುವ ಜೀವನೋಪಾಯದ ಹಕ್ಕಿನ ಉಲ್ಲಂಘನೆಯಾಗಿದೆ. ಆದ್ದರಿಂದ, ಸಿಂಧನೂರಿನ ಬೀದಿ ಬದಿ ವ್ಯಾಪಾರಿಗಳ ಹಕ್ಕುಗಳು ಮತ್ತು ಜೀವನೋಪಾಯವನ್ನು ರಕ್ಷಿಸಲು ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಉಪ ಆಯುಕ್ತರಿಗೆ, ಹಾಗೂ ಕಲಬುರ್ಗಿಯ ಉಪ ಕಾರ್ಮಿಕ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

# ಬಿಜೆಪಿಯ ಬಹುತೇಕ ಸಂಸದರು ವೋಟ್ ಚೋರಿ ಮೂಲಕ ಗೆದ್ದಿದ್ದಾರೆ ;ರಾಹುಲ್ ಗಾಂಧಿ

**ನೈಜ್ಯ ದೆಸೆ ನ್ಯೂಸ್**

**ನವದೆಹಲಿ: ಲೋಕಸಭೆಯಲ್ಲಿ ಇರುವ ಬಿಜೆಪಿಯ ಭಾಗಶಃ ಸಂಸದರು ವೋಟ್ ಚೋರಿ ಮೂಲಕ ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ ಮತ್ತು ಆ ಪಕ್ಷದ ಭಾಷೆಯಲ್ಲಿ ಅವರನ್ನು ಘುಸ್ಪೇಥಿಯಾ ಎಂದು ಹಣೆಪಟ್ಟಿ ಕಟ್ಟಬೇಕೇ ಎಂದು ಕೇಳಿದ್ದಾರೆ.**



ನ್ಯಾಯಯುತ ಚುನಾವಣೆಗಳು ನಡೆದರೆ ಇಂದು ಲೋಕಸಭೆಯಲ್ಲಿ ಬಿಜೆಪಿ 140 ಸ್ಥಾನಗಳನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಗಾಂಧಿ ಹೇಳಿದ್ದಾರೆ.ಮತ ಕದಿಯುವ ಮೂಲಕ, ಕೆಲವೊಮ್ಮೆ ವೈಯಕ್ತಿಕ ಸ್ಥಾನಗಳನ್ನು ಕದಿಯಲಾಗುತ್ತದೆ, ಮತ್ತು ಕೆಲವೊಮ್ಮೆ, ಇಡೀ ಸರ್ಕಾರವನ್ನು ಕದಿಯಲಾಗುತ್ತದೆ. ಲೋಕಸಭೆಯಲ್ಲಿರುವ 240 ಬಿಜೆಪಿ ಸಂಸದರಲ್ಲಿ, ಸರಿಸುಮಾರು ಪ್ರತಿ ಆರನೇ ಸಂಸದರು ಮತ ಚೋರಿಯ ಮೂಲಕ ಸ್ಥಾನವನ್ನು ಪಡೆದುಕೊಂಡಿದ್ದಾರೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ಎಕ್?ಸ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಸುದ್ದಿಪತ್ರಿಕೆ ಚಂದಾದಾರಿಕೆ ಅವರನ್ನು ಗುರುತಿಸುವುದು ಕಷ್ಟವೇನಲ್ಲ ? ನಾವು, ಬಿಜೆಪಿಯ ಸ್ವಂತ ಭಾಷೆಯಲ್ಲಿ, ಅವರನ್ನು ಘುಸ್ಪೇಥಿಯಾ ಎಂದು ಹಣೆಪಟ್ಟಿ ಕಟ್ಟಬೇಕೇ? ಮತ್ತು ಹರಿಯಾಣದ ಬಗ್ಗೆ ಏನು? ಅಲ್ಲಿ, ಇಡೀ ಸರ್ಕಾರವೇ ಘುಸ್ಪೇಥಿಯಾ. ಅವರು ತಮ್ಮ ಜೇಬಿನಲ್ಲಿ ಇಟ್ಟುಕೊಳ್ಳುವ ಸಂಸ್ಥೆಗಳು ಮತದಾರರ ಪಟ್ಟಿಗಳು ಮತ್ತು ಚುನಾವಣಾ ಪ್ರಕ್ರಿಯೆಯನ್ನು ವಿರೂಪಗೊಳಿಸಲು ಅವರು ಕುಶಲತೆಯಿಂದ ನಿರ್ವಹಿಸುವ ಸಂಸ್ಥೆಗಳು ? ಸ್ವತಃ ರಿಮೋಟ್–ನಿಯಂತ್ರಿತವಾಗಿವೆ ಎಂದು ಗಾಂಧಿಯವರು ಬಿಜೆಪಿಯ ಮೇಲೆ ಕಟುವಾದ ದಾಳಿಯಲ್ಲಿ ಹೇಳಿದರು. ಬಂಗಾಳ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ವಿಜಯವನ್ನು ಜನಾದೇಶದ ಕಳ್ಳತನ ಮತ್ತು ಭಾರತೀಯ ಪ್ರಜಾಪ್ರಭುತ್ವವನ್ನು ನಾಶಮಾಡುವ ಕೇಸರಿ ಪಕ್ಷದ ಧ್ಯೇಯದಲ್ಲಿ ಒಂದು ದೊಡ್ಡ ಹೆಜ್ಜೆ ಎಂದು ಕರೆದರು. ಮತದಾನದಲ್ಲಿ ಬಿಜೆಪಿಯಿಂದ ಸೋತಿರುವ ಟಿಎಂಸಿಯನ್ನು ಬೆಂಬಲಿಸಲು ಗಾಂಧಿಯವರು ಬಂದಿದ್ದಾರೆ ಮತ್ತು ಮಮತಾ ಬ್ಯಾನರ್ಜಿಯವರ ಪಕ್ಷದ ಸೋಲಿನಿಂದ ಸಂತೋಷಪಡುವವರು ಕ್ಷುಲ್ಲಕ ರಾಜಕೀಯವನ್ನು ಬದಿಗಿಡುವಂತೆ ಒತ್ತಾಯಿಸಿದರು. ಕಾಂಗ್ರೆಸ್‌ನಲ್ಲಿ ಕೆಲವರು ಮತ್ತು ಇತರರು ಟಿಎಂಸಿಯ ಸೋಲಿನ ಬಗ್ಗೆ ಸಂತೋಷಪಡುತ್ತಿದ್ದಾರೆ. ಅವರು ಇದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು ? ಅಸ್ಸಾಂ ಮತ್ತು ಬಂಗಾಳದ ಜನಾದೇಶದ ಕಳ್ಳತನವು ಭಾರತೀಯ ಪ್ರಜಾಪ್ರಭುತ್ವವನ್ನು ನಾಶಮಾಡುವ ತನ್ನ ಧ್ಯೇಯದಲ್ಲಿ ಬಿಜೆಪಿಯ ದೊಡ್ಡ ಹೆಜ್ಜೆಯಾಗಿದೆ ಎಂದು ಗಾಂಧಿಯವರು ಆರೋಪಿಸಿದ್ದಾರೆ.

# ನೂರು ದಿನಗಳ ಕ್ಷಯರೋಗ ಪತ್ತೆ ಆಂದೋಲನ ತರಬೇತಿ



**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಕ್ಷಯ ಮುಕ್ತ ಗ್ರಾಮ ಮಾಡುವ ಉದ್ದೇಶದಿಂದ ಕ್ಷಯ ರೋಗ ಜಾಗೃತಿ,ಆರೋಗ್ಯ ಶಿಕ್ಷಣ, ಪತ್ತೆ ಹಚ್ಚುವಿಕೆ, ಸಂಪೂರ್ಣ ಪರಿಣಾಮಕಾರಿ ಚಿಕಿತ್ಸೆಯ ಮೂಲಕ ಕ್ಷಯ ಮುಕ್ತ ಭಾರತ ಅಭಿಯಾನ ದಡಿ ನೂರು ದಿನಗಳ ಕ್ಷಯ ರೋಗ ಆಂದೋಲನ ಅಂಗವಾಗಿ ಪಟ್ಟಣದ ವೈದ್ಯಕೀಯ ಸಂಘದ ಸಭಾಂಗಣದಲ್ಲಿ.**

ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಮಾತನಾಡಿದ ಜಿಲ್ಲಾ ಕ್ಷಯ ರೋಗ ನಿರ್ಮೂಲನೆ ಅಧಿಕಾರಿ ಡಾ: ಮಹ್ಮದ



ಶಾಕೀರ್ ಅವರು ತಾಲೂಕಿನ ಗ್ರಾಮಗಳಲ್ಲಿ ಈಗಾಗಲೇ ಕ್ಷಯ ರೋಗ ಚಿಕಿತ್ಸೆ ಪಡೆಯುತ್ತಿರುವ ಕುಟುಂಬ ಸದಸ್ಯ ರನ್ನೊಳಗೊಂಡು ಇತರ ತೊಂದರೆದಾಯಕ ಕ್ಷಯರೋಗ ಲಕ್ಷಣ ಇರುವ ಎಲ್ಲರಿಗೂ ಕಫ ಪರೀಕ್ಷೆ, ಎಕ್ಸ್ ರೇ ಮೂಲಕ ಪರೀಕ್ಷಿಸಿ ಸಂಪೂರ್ಣ ಉಚಿತ ಖಚಿತ ಚಿಕಿತ್ಸೆ ನೀಡಿ 2030 ರ ವೇಳೆಗೆ ಕ್ಷಯರೋಗ ನಿರ್ಮೂಲನೆಗೆ ಆರೋಗ್ಯ ಇಲಾಖೆಯ ಸಿಬ್ಬಂದಿ ಕಾರ್ಯ ನಿರ್ವಹಿಸಲು ಸೂಚಿಸಿದರು. ಸಾಂಕ್ರಾಮಿಕ ರೋಗವಾದ ಕ್ಷಯ ರೋಗ ಮುಕ್ತ ಮಾಡಲು ಸಾರ್ವಜನಿಕರು ಹಾಗೂ ಸಂಘ ಸಂಸ್ಥೆ, ಖಾಸಗಿ ವೈದ್ಯರ ಸಹಕಾರ ಅಗತ್ಯ ವೆಂದು ಮಾಹಿತಿ ನೀಡಿದರು.

ನಂತರ ಮಾತನಾಡಿದ ತಾಲೂಕ ಆರೋಗ್ಯ ಅಧಿಕಾರಿ ಡಾ: ಅಮರೇಶ ಪಾಟೀಲ ಅವರು ಕ್ಷಯ ರೋಗ ಲಕ್ಷಣ, ಚಿಕಿತ್ಸಾ ವಿಧಾನಗಳು ಮತ್ತು ನಿಕ್ಷಯ ಪೋಷಣೆ ಕು–ರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ ವೈದ್ಯಾಧಿಕಾರಿಗಳಾದ ಡಾ: ಹನ್ಮಂತರಾಯ ತಳ್ಳಳ್ಳಿ , ಡಾ: ರವಿಕಿರಣ , ಡಾ: ಶಿವನಾಥ , ಡಾ: ಅಭಿಜಿತ್, ಡಾ: ಲಕ್ಮೀಕಾಂತ , ಡಾ:ವಿಜಯಕುಮಾರ ಜಿಲ್ಲಾ ಮೇಲ್ವಿಚಾರಕ ಅಬ್ದುಲ್ ನಬಿ , ರವಿಕುಮಾರ ಹೂಗಾರ. ದೇವರಾಜ , ಮಹಾಂತೇಶ ಬ್ಯಾಳಿ , ಶಿವಲೀಲಾ ಮೇಟಿ , ನಾಗರತ್ನ , ಬಸವರಾಜ , ವಾಸೀಂರೆಹಮಾನ , ಸಿದ್ಧಾರೂಢ , ಪ್ರಾಥಮಿಕ ಆರೋಗ್ಯ ಕೇಂದ್ರಗಳ ಎಲ್ಲ ವೈದ್ಯಾಧಿಕಾರಿಗಳು, ಮೇಲ್ವಿಚಾರಕರು , ಸಿ.ಹೆಚ್.ಓ. ಸೇರಿದಂತೆ ಇತರರು ಹಾಜರಿದ್ದರು.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿ ಆಹ್ವಾನ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026–27ನೇ ಶೈಕ್ಷಣಿಕ ಸಾಲಿನಿಂದ ನೂತನವಾಗಿ ಮಹಿಳಾ ಪದವಿ ಪೂರ್ವ ಕಾಲೇಜ್ ಅನ್ನು ಚಂದ್ರಬಂಡ ರಸ್ತೆಯ ವಿಜ್ಞಾನ್ ಶಾಲೆಯ ಎದುರುಗಡೆ ಇರುವ ಇಲಾಖೆಯ ಕಟ್ಟಡದಲ್ಲಿ ಆರಂಭಿಸಲಾಗುತ್ತಿದ್ದು, ವಿವಿಧ ವಿಷಯಗಳ ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಕನ್ನಡ ವಿಷಯದ 1 ಉಪನ್ಯಾಸಕರ ಹುದ್ದೆಗೆ ಎಂ.ಎ. ಬಿ.ಎಡ್, ಇಂಗ್ಲೀಷ್ ವಿಷಯದ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿಎಡ್, ಹಿಂದಿ 1 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಉರ್ದು 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಇತಿಹಾಸ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಅರ್ಥಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ರಾಜ್ಯಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಸಮಾಜಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎ, ಬಿ.ಎಡ್, ಕಂಪ್ಯೂಟರ್ ಸೈನ್ಸ್ 1 ಉಪನ್ಯಾಸಕರ ಹುದ್ದೆಗೆ ಎಂಕಾಂ, ಬಿ.ಎಡ್, ವ್ಯವಹಾರ ಅಧ್ಯಯನ 1 ಉಪನ್ಯಾಸಕರ ಹುದ್ದೆಗೆ ಎಂಕಾಂ, ಬಿ.ಎಡ್, ಅಕೌಂಟೆನ್ಸಿ/ ಲೆಕ್ಕಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂಕಾಂ, ಬಿ.ಎಡ್, ಭೌತಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್,

ರಸಾಯನಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್, ಗಣಿತಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್, ಜೀವಶಾಸ್ತ್ರ 1 ಉಪನ್ಯಾಸಕರ ಹುದ್ದೆಗೆ ಎಂ.ಎಸ್ಸಿ, ಬಿ.ಎಡ್ ಪಡೆದ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಡಿಗ್ರಿ ಅಂಕಪಟ್ಟಿ, ಸ್ನಾತಕೋತ್ತರ ಪದವಿಯ ಅಂಕಪಟ್ಟಿ, ಬಿಇಡಿ ಅಂಕಪಟ್ಟಿ ಮತ್ತು ಆಧಾರ್ ಕಾರ್ಡ್ಗಳ ಜೆರಾಕ್ಸ್ ಪ್ರತಿಗಳೊಂದಿಗೆ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಲಗತ್ತಿಸಿ ಮೇ.11ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಸಂಪರ್ಕ ಕೇಂದ್ರದ ಸಂಖ್ಯೆ: 9731028420 ಅಥವಾ 9845494630ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ಜಾಗೃತಿ ಸಮಾವೇಶ ಯಶಸ್ವಿಗೆ ಸಹಕರಿಸಿ: ಶಾಂತಗೌಡ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ವಿಜಯಪುರ ನಗರದಲ್ಲಿ ಮೇ 8 ರಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ನಡೆಯಲಿರುವ 4 ನೇ ರಾಜ್ಯಮಟ್ಟದ ರೈತ ಜಾಗೃತಿ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರೈತ ಸಂಘ ರಾಜ್ಯ ಉಪಾಧ್ಯಕ್ಷ ಶಾಂತಗೌಡ ನಡಹಳ್ಳಿ ತಿಳಿಸಿದರು.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನೀರಾವರಿ ಯೋಜನೆಗಳು ಅನುಷ್ಠಾನಕ್ಕೆ ಬರದೆ ರೈತ ಬಾಂಧವರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ರೈತರು ಬೆಳೆದ ಕಬ್ಬಿಗೆ




ಸರಿಯಾದ ಬೆಲೆ ಸಿಗುತ್ತಿಲ್ಲ, ಸರಕಾರದ ವೇವ ಬ್ರಿಜ್ ಇರದೇ ಇರುವುದರಿಂದ ರೈತರು ಹೆಚ್ಚಿನ ದರ ನೀಡುವಂತಾಗಿದೆ. ಇದನ್ನು ತಪ್ಪಿಸಲು ಕ್ರಮ ವಹಿಸಬೇಕು ಈ ಎಲ್ಲಾ ಸಮಸ್ಯೆಗಳು ಕುರಿತು ಸರ್ಕಾರಕ್ಕೆ ಎಚ್ಚರಿಕೆ ನೀಡಲು ಈ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ. ಸಮಾವೇಶದಲ್ಲಿ ರೈತರ ಸಮಸ್ಯೆಗಳ ಕುರಿತು ಚರ್ಚಿಸಲಾಗುವುದು. ಕಾರ್ಯಕ್ರಮದ ಯಶಸ್ವಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಲ್ಲರೂ ಸಹಕರಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸಮಾವೇಶದ ಕರಪತ್ರವನ್ನು ಬಿಡುಗಡೆಗೊಳಿಸಲಾಯಿತು. ಸುದ್ದಿ ಗೋಷ್ಠಿಯಲ್ಲಿ ತಾಲೂಕಾ ಅಧ್ಯಕ್ಷ ಶ್ರೀಶೈಲ ವಾಲಿಕಾರ, ತಾಲೂಕಾ ಮಹಿಳಾ ಘಟಕದ ಅಧ್ಯಕ್ಷೆ ಸುಜಾತಾ ಅವಟಿ, ತಾಲೂಕಾ ಸಂಚಾಲಕ ಲಿಂಗರಾಜ ಮೇಟಿ, ಹಸನ್ ಹಳ್ಳದಮನಿ, ಶಂಕ್ರಪ್ಪ ಟಕ್ಕಳಕಿ, ಮಲ್ಲಪ್ಪ ಮುದನೂರ, ಅಪ್ಪಯ್ಯ ಕರಕಳ್ಳಿಮಠ,ಶರಣು ಸಿಂದಗಿ, ಸಿದ್ದಪ್ಪ ತಳವಾರ, ಮುರ್ತುಜಾ ವಿಜಾಪುರ, ಲಕ್ಷ್ಮೀಬಾಯಿ ಸಜ್ಜನ, ಬೋರಮ್ಮ ಕುಂಬಾರ, ಸುಧಾಮಡ್ಡಿ ಶಾಂತಮ್ಮ ಹಿರೇಮಠ ಜನತಬಿ ಬಿದರಿ, ರೇಣುಕಾ ಕುಂಬಾರ, ಹಾಗೂ ಪದಾಧಿಕಾರಿಗಳು ಇದ್ದರು.

# ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಹಾಗೂ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಸಿಂಧನೂರು ಸಂಯುಕ್ತ ಆಶ್ರಯದಲ್ಲಿ ಪರಿಷತ್ತಿನ 112 ನೇ ಸಂಸ್ಥಾಪನಾ ದಿನಾಚರಣೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಸಿಂಧನೂರಿನ ಸನ್ ರೈಸ್ ಡಿ ಫಾರ್ಮಸಿ ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ ಯಶಸ್ವಿಯಾಗಿ ನೆರವೇರಿತು.**

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸನ್ ರೈಸ್ ಕಾಲೇಜ್ ಸಿಂಧನೂ–ರಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ. ಇರ್ಫಾನ್ ಅವರು, ಕನ್ನಡ ಭಾಷೆ ಮತ್ತು ಸಾಹಿತ್ಯ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳು ದೈನಂದಿನ ಬದುಕಿನಲ್ಲಿ ಶುದ್ಧ ಕನ್ನಡ ಬಳಕೆಗೆ ಒತ್ತು ನೀಡಬೇಕು ಹಾಗೂ ಸಾಹಿತ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು. ಕನ್ನಡ ಪರಂಪರೆಯ ನಡೆದು ಬಂದ ದಾರಿಯನ್ನು ಅರಿತು ಕನ್ನಡ ರಥವನ್ನು ಮುಂದಕ್ಕೆ ಎಳೆಯುವ



ಹೊಣೆ ಯುವಪೀಳಿಗೆಯ ಮೇಲಿದೆ ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಶ್ರೀ ಬೀರಪ್ಪ ಶಂಭೋಜಿ ಅವರು ಸಾಹಿತ್ಯ ದತ್ತಿಗಳ ಮೂಲಕ ಧನಸಹಾಯ ಹೆಚ್ಚುತ್ತಿರುವುದನ್ನು ಸಂತಸದಿಂದ ಉಲ್ಲೇಖಿಸಿ, ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ನಿಯಮಿತವಾಗಿ ನಡೆಸುವ ಅಗತ್ಯವಿದೆ ಎಂದು ಹೇಳಿದರು. ಶಬ್ದ ಬಳಕೆಯಲ್ಲಿ ಶುದ್ಧತೆ ಕಾಪಾಡಿದಾಗ ಮಾತ್ರ ಕನ್ನಡ ಭಾಷೆ ಉಳಿಯುತ್ತದೆ ಎಂದು ಅಭಿಪ್ರಾಯಪಟ್ಟರು. ಮಾಜಿ ಅಧ್ಯಕ್ಷರಾದ ಶ್ರೀ ವೆಂಕನಗೌಡ ವಟಗಲ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಮಿರ್ಜಾ ಇಸ್ಮಾಯಿಲ್ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಅವರ ಸಮಾಜಮುಖಿ ಸಾಧನೆಗಳನ್ನು ಪರಿಚಯಿಸಿ, ಕನ್ನಡ ನಾಡಿನ ಇತಿಹಾಸ ಮತ್ತು





ಅಭಿವೃದ್ಧಿ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಜಿಲ್ಲಾ ಮಹಿಳಾ ಪ್ರತಿನಿಧಿ ಶ್ರೀಮತಿ ರಮಾದೇವಿ ಶಂಭೋಜಿ ಅವರು ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಪರೀಕ್ಷೆಗಳು, ಪುಸ್ತಕ ಧನಸಹಾಯ ಯೋಜನೆಗಳು ಹಾಗೂ ಪ್ರಶಸ್ತಿ ಪುರಸ್ಕಾರಗಳ ಕುರಿತು ಮಾಹಿತಿ ನೀಡಿ, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಸೇವಾ ಚಟುವಟಿ–ಕೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ಶ್ರೀಮತಿ ಲಕ್ಷ್ಮಿ ಪತ್ತಾರ್ ಅವರು ದತ್ತಿಗಳ ಮಹತ್ವ ಹಾಗೂ ಅದರ ಉದ್ದೇಶಗಳ ಕು–ರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ಘಟಕ ಕ.ಸಾ.ಪ ಅಧ್ಯಕ್ಷ ಹೆಚ್. ಎಫ್. ಮಸ್ಕಿ ಅವರು, ಕನ್ನಡ ಕಾರ್ಯಕ್ರಮಗಳು ಯಶಸ್ವಿಯಾಗಲು ಕನ್ನಡಾಭಿಮಾನಿಗಳ ಒಗ್ಗಟ್ಟು ಮುಖ್ಯ ಕಾರಣ ಎಂದು ಹೇಳಿದರು. ಕನ್ನಡ ನಾಡು, ನುಡಿ, ನೆಲ, ಜಲ ಹಾಗೂ ಭಾಷಾ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಿರೂಪಣೆ: ಶ್ರೀಮತಿ ಶಾಂತ ಒಳಗಿನ ಮನೆ ಪ್ರಾಸ್ತಾವಿಕ ನುಡಿ: ಶ್ರೀ ಚಂದ್ರೇಗೌಡ ಹರಟೆನೂರು ವಂದನಾರ್ಪಣೆ: ಶ್ರೀ ಹೆಚ್.ಎಂ. ಶ್ರೀಶೈಲ, ಉಪನ್ಯಾಸಕರು

## ಶಿಕ್ಷಣ ಮಾರ್ಗದರ್ಶಿ ವಿಶೇಷ


### ಐಟಿಐ ಎಲೆಕ್ಟ್ರಿಷಿಯನ್

ITI ಎಲೆಕ್ಟ್ರಿಷಿಯನ್ ಕೋರ್ಸ್ ಎಂಬುದು 2 ವರ್ಷಗಳ (4 ಸೆಮಿಸ್ಟರ್) ತಾಂತ್ರಿಕ ತರಬೇತಿಯಾಗಿದ್ದು, ವಿದ್ಯುತ್ ವೈರಿಂಗ್, ರಿಪೇರಿ, ಮತ್ತು ಉಪಕರಣಗಳ ನಿರ್ವಹಣೆಯ ಮೇಲೆ ಕೇಂದ್ರೀಕರಿಸುತ್ತದೆ. 10ನೇ ತರಗತಿ (ವಿಜ್ಞಾನ ಮತ್ತು ಗಣಿತದೊಂದಿಗೆ) ಪೂರ್ಣಗೊಳಿಸಿದವರು, 14–40 ವರ್ಷದೊಳಗಿನವರು ಪ್ರವೇಶ ಪಡೆಯಬಹುದು. ಇದು ಕೈಗಾರಿಕೆ, ಗೃಹ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ನೀಡುತ್ತದೆ. ITI ಎಲೆಕ್ಟ್ರಿಷಿಯನ್ ಕೋರ್ಸ್‌ನ ಮುಖ್ಯಾಂಶಗಳು:ಅವಧಿ: 2 ವರ್ಷಗಳು (ಎರಡು ಸೆಮಿಸ್ಟರ್ ಅಥವಾ ವಾರ್ಷಿಕ ಪದ್ಧತಿ).ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತ ಕಡ್ಡಾಯ). ವಯೋಮಿತಿ: 14 ವರ್ಷ ಮೇಲ್ಪಟ್ಟವರು.ಕೋರ್ಸ್ ಪ್ರಕಾರ: ಟ್ರೇಡ್ ಥಿಯರಿ, ಪ್ರಾಕ್ಟಿಕಲ್, ಇಂಜಿನಿಯರಿಂಗ್ ಡ್ರಾಯಿಂಗ್ ಮತ್ತು ವರ್ಕ್‌ಶಾಪ್ ಕ್ಯಾಲ್ಕುಲೇಷನ್.ಕಲಿಯುವ ವಿಷಯಗಳು: ವಿದ್ಯುತ್ ಉಪಕರಣಗಳ ರಿಪೇರಿ, ವೈರಿಂಗ್, ಟ್ರಾನ್ಸ್‌ಫಾರ್ಮರ್‌ಗಳು, ಜನರೇಟರ್‌ಗಳು, ಮೋಟಾರ್‌ಗಳು, ಮತ್ತು ಸುರಕ್ಷತಾ ನಿಯಮಗಳು. ಉದ್ಯೋಗಾವಕಾಶಗಳು: ಸರ್ಕಾರಿ ವಲಯ: KPTCL, MESCOM, BESCOM, ರೈಲ್ವೆ, BHEL, DRDO ಇತ್ಯಾದಿಗಳಲ್ಲಿ ಅಸಿಸ್ಟೆಂಟ್ ಎಲೆಕ್ಟ್ರಿಷಿಯನ್ ಅಥವಾ ಟೆಕ್ನಿಷಿಯನ್.ಖಾಸಗಿ ವಲಯ: ತಯಾರಿಕಾ ಉದ್ಯಮಗಳು, ನಿರ್ಮಾಣ ಕಂಪನಿಗಳು, ವಿದ್ಯುತ್ ಉತ್ಪಾದನಾ ಘಟಕಗಳು.ಸ್ವಯಂ ಉದ್ಯೋಗ: ಸ್ವಂತ ಎಲೆಕ್ಟ್ರಿಕಲ್ ಶಾಪ್ ಅಥವಾ ವೈರಿಂಗ್ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡಬಹುದು.ಅಗತ್ಯವಿರುವ ಕೌಶಲ್ಯಗಳು: ತಾಂತ್ರಿಕ ಜ್ಞಾನ ಮತ್ತು ಸುರಕ್ಷತಾ ಕ್ರಮಗಳ ಅರಿವು.ವಿದ್ಯುತ್ ಸರ್ಕ್ಯೂಟ್‌ಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ.

## ಹದಿನೈದು ನಿಮಿಷದಲ್ಲೇ ಕಳೆದು ಹೋಗಿದ್ದ ಮೊಬೈಲ್ ಪತ್ತೆ ಹಚ್ಚಿದ ಪೊಲೀಸರು

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಮೊಬೈಲ್ ಫೋನ್ ಕಳೆದು ಹೋದ ಹದಿನೈದು ನಿಮಿಷದಲ್ಲಿ ಫೈಂಡ್ ಹಬ್ ಆ?ಯಪ್ ಬಳಸಿ ಪತ್ತೆಹಚ್ಚುವಲ್ಲಿ ರಾಮಮೂರ್ತಿನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ಚಂದ್ರವದನ ಲೇಔಟ್‌ನ ರೆಸಿಡೆನ್ಸಿ ಮನೆಯೊಂದರ ಸಮೀಪ ಪ್ರವೀಣ್ ಎಂಬುವವರ ಮೊಬೈಲ್ ಕಳೆದು ಹೋಗಿದ್ದು, ಕೂಡಲೇ ಸಹಾಯವಾಣಿ ನಮ–112 ಕ್ಕೆ ಕರೆ ಮಾಡಿ ದೂರು ನೀಡಿದ್ದಾರೆ.**



ಕೂಡಲೇ ಕಾರ್ಯಪ್ರವೃತ್ತರಾದ ನಮ–112 ಸಿಬ್ಬಂದಿಯವರು ರಾಮಮೂರ್ತಿನಗರ ಪೊಲೀಸ್ ಠಾಣೆಯ ಹೊಯ್ಸಳ–49 ರಲ್ಲಿ ಕರ್ತವ್ಯದಲ್ಲಿದ್ದ ಎಎಸ್‌ಐ ಚೌಡಪ್ಪ ಮತ್ತು ಎಪಿಸಿ ಬಸವರಾಜ್ ಅವರಿಗೆ ಮಾಹಿತಿ ರವಾನಿಸಲಾಗಿತ್ತು. ಹದಿನೈದು ನಿಮಿಷದಲ್ಲೇ ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲನೆ ನಡೆಸಿ ಫೈಂಡ್ ಹಬ್ ಆ?ಯಪ್ ಬಳಸಿ ಮೊಬೈಲ್ ಇರುವ ಸ್ಥಳವನ್ನು ಪತ್ತೆಹಚ್ಚಿ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ.

## ಮೇ.11ರಂದು ರಾಯಚೂರಿನ ಐಟಿಐ ಕಾಲೇಜಿನಲ್ಲಿ ಶಿಶಿಕ್ಷುಂ ಮೇಳ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: 2026–27ನೇ ಸಾಲಿನಲ್ಲಿ ಪಿ.ಎಮ್.ಎನ್.ಎ.ಎಮ್ ವತಿಯಿಂದ ನಗರದ ಮಾಣಿಕ ರಾಯಚೂರು ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇ.11ರ ಬೆಳಿಗ್ಗೆ 10ಗಂಟೆಗೆ ಶಿಶಿಕ್ಷುಂ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.**

ಈ ಶಿಶಿಕ್ಷುಂ ಮೇಳದಲ್ಲಿ ವಿವಿಧ ಉದ್ದಿಮೆಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ಶಿಶಿಕ್ಷುಂ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಐಟಿಐ ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಈಗಾಗಲೇ ಐಟಿಐ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಮೇಳದಲ್ಲಿ ಕೆ.ಪಿ.ಸಿ, ವೈ.ಟಿ.ಪಿ.ಎಸ್, ಟೋಯೋಟಾ, ಹೋಂಡಾ ಪ್ರೈಮೇಟ್ ಲಿಮಿಟೆಡ್ ಕೋಲಾರ, ಕೇನ್ಸ ಟೆಕ್ನಾಲಜಿ ಇಂಡಿಂ–ಮಾ ಲಿಮಿಟೆಡ್, ಎಲ್.ಎನ್.ಟಿ, ಜೆ.ಎಸ್.ಡ್ಬ್ಯ ಹಾಗೂ ಬೆಂಗಳೂರು ಮತ್ತು ಹೈದ್ರಾಬಾದ್ ನ ಪ್ರತಿಷ್ಠಿತ ಬಹುರಾಷ್ಟ್ರೀಯ (ಮಲ್ಟಿ ನ್ಯಾಷನಲ್) ಕಂಪನಿಗಳು ಭಾಗವಹಿಸಲಿವೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9036684778, 9035198134, 9538003397, 8904784507ಗೆ ಸಂಪರ್ಕ ಮಾಡಬಹುದಾಗಿದೆ ಅಥವಾ ರಾಯಚೂರು ನಗರದ ಮಾಣಿಕ್ ನಗರದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಕಚೇರಿಯ ಸಮಯದಲ್ಲಿ ಭೇಟಿ ನೀಡಿ, ಮಾಹಿತಿ ಪಡೆಯಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರು

**ನಿಮ್ಮ ಭವಿಷ್ಯದ ಭರವಸೆಯ ವೃತ್ತಿಜೀವನಕ್ಕಾಗಿ ಇಂದೇ ಪ್ರವೇಶ ಪಡೆಯಿರಿ!**



**ವಿಶೇಷ ಆಕರ್ಷಣೆ:** ಇಂದಿನ AI (ಕೃತಕ ಬುದ್ಧಿಮತ್ತೆ) ಜಗತ್ತಿನ ತಲ್ಲಣದಲ್ಲಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕ್ಷೇತ್ರದಲ್ಲಿ ಮಾತ್ರ ಶಾಶ್ವತ ಭರವಸೆ. ಕೊನೆ ಇಲ್ಲದ ಉದ್ಯೋಗ ಅವಕಾಶಗಳು. ವೃತ್ತಿಪರ ಮತ್ತು ಗೌರವಯುತ ಜೀವನ ನಿಮ್ಮದಾಗಿಸಿಕೊಳ್ಳಿ. ಕೇವಲ 3 ರಿಂದ 4 ವರ್ಷಗಳಲ್ಲಿ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಿ.

**ಲಭ್ಯವಿರುವ ಕೋರ್ಸ್‌ಗಳು:**

- DMLT: ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ
- DHI: ಡಿಪ್ಲೊಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್
- DOT & AT: ಡಿಪ್ಲೊಮಾ ಇನ್ ಆಪ್ಥಾಲ್ಮಿಕ್ ಮತ್ತು ಆಪರೇಷನ್ ಥಿಯೇಟರ್ ಟೆಕ್ನಾಲಜಿ

**ಕೋರ್ಸುಗಳ ವೈಶಿಷ್ಟ್ಯತೆಗಳು:**

- ಸರ್ಕಾರಿ ಮತ್ತು ಖಾಸಗಿ ವಲಯ: ಸರ್ಕಾರಿ ಅಥವಾ ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ತಕ್ಷಣದ ಉದ್ಯೋಗ ಅವಕಾಶ.
- ವೈವಿಧ್ಯಮಯ ಉದ್ಯೋಗಗಳು: ರೈಲ್ವೆ ಇಲಾಖೆ, ಭಾರತೀಯ ರಕ್ಷಣಾ ಪಡೆಗಳಲ್ಲಿ ನೌಕರಿ ಪಡೆಯುವ ಸುವರ್ಣಾವಕಾಶ.
- ಸ್ವಯಂ ಉದ್ಯೋಗ: ತರಬೇತಿಯ ನಂತರ ನಿಮ್ಮದೇ ಸ್ವಂತ ಲ್ಯಾಬೋರೇಟರಿ ಅಥವಾ ಕ್ಲಿನಿಕ್ ಪ್ರಾರಂಭಿಸಲು ಅವಕಾಶ.
- ಸಾರ್ವಜನಿಕ ಸೇವೆ: ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಮಹಾನಗರ ಪಾಲಿಕೆ ಮತ್ತು ನಗರಸಭೆಗಳಲ್ಲಿ ವೃತ್ತಿ ಜೀವನ ಆರಂಭಿಸಬಹುದು.
- ಪ್ರಾಯೋಗಿಕ ಕಲಿಕೆ: ಅತ್ಯಾಧುನಿಕ ಲ್ಯಾಬ್ ಹಾಗೂ ಅನುಭವಿ ವೈದ್ಯರ ಮಾರ್ಗದರ್ಶನದಲ್ಲಿ ತರಬೇತಿ.

**ಅರ್ಹತೆ (Eligibility):**

SSLC: 3 ವರ್ಷಗಳ ಅವಧಿ.
II PUC ವಿಜ್ಞಾನ: 2 ವರ್ಷಗಳ ಅವಧಿ.
II PUC (ಕಲೆ/ವಾಣಿಜ್ಯ): 3 ವರ್ಷಗಳ ಅವಧಿ.

**ಸ್ಥಳ ಮತ್ತು ಸಂಪರ್ಕ:**

ವಿಳಾಸ: ವಾಸವಿ ಕಲ್ಯಾಣ ಮಂಟಪದ ಎದುರುಗಡೆ, PWD ಕ್ಯಾಂಪ್, ಸಿಂಧನೂರು.
ದೂರವಾಣಿ: 8197143588, 9036731385


# ಸರ್ಕಾರಿ ಗೋಮಾಳ ಜಮೀನು ಸರ್ವೇ ಕಾರ್ಯಕ್ಕೆ ಗ್ರಾಮಸ್ಥರ ವಿರೋಧ.

**ನೈಜ್ಯ ದೆಸೆ ನ್ಯೂಸ್**

**ಬಾಗೇಪಲ್ಲಿ: ಗ್ರಾಮಸ್ಥರ ವಿರೋಧದ ನಡುವೆ ಸರ್ಕಾರಿ ಗೋಮಾಳ ಜಮೀನು ಸರ್ವೇ ಕಾರ್ಯಕ್ಕೆ ತೆರಳಿದ್ದ ತಹಶೀಲ್ದಾರ್ ಮನೀಷಾಪತ್ರಿ ಹಾಗೂ ಭೂ ಮಾಪನಾ ಇಲಾಖೆ ಅಧಿಕಾ–ರಿಗಳ ವಿರುದ್ದ ಗ್ರಾಮಸ್ಥರು ತಿರುಗಿಬಿದ್ದಿರುವ ಘಟನೆ ಚನ್ನರಾಯನಪಲ್ಲಿ ಗ್ರಾಮದಲ್ಲಿ ನಡೆದಿದೆ.**

ಬಾಗೇಪಲ್ಲಿ ತಾಲೂಕಿನ ನಲ್ಲಪರೆಡ್ಡಿಪಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಚನ್ನರಾಯನಪಲ್ಲಿ ಗ್ರಾಮದ ಬಳಿಯಲ್ಲಿರುವ ಸರ್ಕಾರಿ ಗೋಮಾಳ ಜಮೀನನ್ನು ತಾಲೂಕು ಆಡಳಿತ ಗೂಳೂರು ಗ್ರಾಮ ಪಂಚಾಯತಿಯ ಅಶ್ರಯ ಯೋಜನೆಯ ನಿವೇಶನಗಳಿಗಾಗಿ ಮಂಜೂರು ಮಾಡಿದ್ದು, ಸದರಿ ಗೋಮಾಳ ಜಮೀನನ್ನು ಆಳತೆ ಮಾಡಲು ತಾಲೂಕು ಮಟ್ಟದ ಅಧಿಕಾರಿಗಳು ಜಮೀನು ಬಳಿ ತೆರಳಿರುತ್ತಾರೆ. ಗ್ರಾಮಸ್ಥರು ಆಳತೆ ಕಾರ್ಯಕ್ಕೆ ಅಡ್ಡಿಪಡಿಸಿ ತಾಲೂಕು ಆಡಳಿತದ ವಿರುದ್ದ ತಿರುಗಿಬಿದ್ದಾರೆ.

ನಲ್ಲಪರೆಡ್ಡಿಪಲ್ಲಿ ಮತ್ತು ಚನ್ನರಾಯನಪಲ್ಲಿ ಗ್ರಾಮದ ಸುತ್ತಮುತ್ತಲಿನಲ್ಲಿರುವ ಸರ್ಕಾರಿ ಗೋಮಾಳ ಜಮೀನನನ್ನು ಅಶ್ರಯ ನಿವೇಶನಗಳಿಗಾಗಿ ಮಂಜೂರು ಮಾಡಬಾರದು, ಸರ್ಕಾರ ದನಕರುಗಳ ಮೇವುಗಾಗಿ ಮೀಸಲಿಟ್ಟಿರುವ ಗೋಮಾಳ ಜಮೀನು ದನಕರುಗಳ ಮೇವಿಗಾಗಿಯೇ



ಉಳಿಯಬೇಕೆಂದು 2022 ಮಾರ್ಚ್ 11 ರಂದು ಅಂದಿನ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗೆ ಎರಡು ಗ್ರಾಮಗಳ ಗ್ರಾಮಸ್ಥರು ಮನವಿ ಸಲ್ಲಿಸಿ ಮಂಜೂರಾತಿಗೆ ಅಡ್ಡಿಪಡಿಸಿರುತ್ತಾರೆ, ಎರಡು ಗ್ರಾಮಗಳ ಗ್ರಾಮಸ್ಥರ ಮನವಿಗೆ ವಿರುದ್ದವಾಗಿ ಇಂದಿನ ತಹಶೀಲ್ದಾರ್ ಮನೀಷಾಪತ್ರಿ ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿದ್ದಾರೆಂದು ಗ್ರಾಮಸ್ಥರ ಆಕ್ರೋಶವಾಗಿದೆ.

2022 ರಲ್ಲಿ ಎರಡು ಗ್ರಾಮಗಳ ಗ್ರಾಮಸ್ಥರು ಸಲ್ಲಿಸಿರುವ ದೂರು ಅರ್ಜಿಯಂತೆ ಎರಡು ಗ್ರಾಮಗಳ ಗ್ರಾಮಸ್ಥರೊಂದಿಗೆ ತಾಲೂಕು ಆಡಳಿತ ಗ್ರಾಮ ಸಭೆ ನಡೆಸಿ ನಾಗ–ರೀಕರ ಅಭಿಪ್ರಾಯವನ್ನು ಸಂಗ್ರಹಿಸದೆ ಏಕಾ–ಏಕಿ ಸರ್ಕಾರಿ ಗೋಮಾಳ ಜಮೀನನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತನೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಗ್ರಾಮಸ್ಥರು ತಹಶೀಲ್ದಾರ್‌ನ್ನು ಪ್ರಶ್ನಿಸಿ ಸರ್ವೇ ಕಾರ್ಯಕ್ಕೆ ಅಡ್ಡಿಪಡಿಸಿದ್ದಾರೆ. ಈ ಸಂದರ್ಭದಲ್ಲಿ ಆರ್.ವಿ.ದೇವರಾಜು, ಪಿ.ರಾಮಾಂಜಿನಪ್ಪ, ವೆಂಕಟಸ್ವಾಮಿ, ಆಧಿನಾರಾಯಣ, ಪ್ರಕಾಶ್, ಈರಪ್ಪ, ಶಿವಪ್ಪ, ಪಿ.ವೆಂಕಟಸ್ವಾಮಿ, ರಾಮಪ್ಪ, ಸಿ.ವಿ.ಶ್ರೀನಾಥ, ಸುರೇಶ್, ಲಕ್ಷ್ಮೀನಾರಾಯಣ, ಕೆ.ಮಂಜುನಾಥ, ವಿ.ಅಶೋಕ, ವೆಂಕಟೇಶ್, ಜಯಕುಮಾರ್, ಶ್ರೀಕಾಂತ, ಅಶ್ವತ್ಥನಾರಾಯಣ, ನಾರಾಯಣಪ್ಪ, ರಾಮಾಂಜಿನಪ್ಪ ಮತ್ತಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.